4) ವಿಷಯ : ರಾಜ್ಯದಲ್ಲಿರುವ ಸಹಕಾರ ಸಂಘಗಳಲ್ಲಿ ಹಣದುರುಪಯೋಗ ಹಾಗೂ ಫಲಾನುಭವಿಗಳಿಗೆ ಸಿಗಬೇಕಾದ ಸೌಲಭ್ಯಗಳನ್ನು ಒಬ್ಬನೇ ಉಪಯೋಗಿಸುತ್ತಿದ್ದಾರೆಂದು ಪತ್ರಿಕಾ ಹೇಳಿಕೆ ಕುರಿತು.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಮಂತ್ರಿಗಳು ಅಧಿಕಾರ ಸ್ವೀಕಾರ ಮಾಡಿದ ಎರಡೇ ದಿವಸದಲ್ಲಿ ಸಹಕಾರ ಇಲಾಖೆಯಲ್ಲಿ ನಡೆಯುತ್ತಿರುವ ಅವ್ಯವಹಾರವನ್ನು ಪತ್ರಿಕೆಯ ಮುಖೇನ ಹೇಳಿದ್ದಾರೆ. ಸಹಕಾರಿ ಸಂಘಗಳ ದುರುಪಯೋಗ, ಹಣ ದುರ್ಬಳಕೆ ಮಾಡುವುದು ಸಮಾಜಕ್ಕೆ ಮಾಡುವ ದ್ರೋಹ. 1 ಲಕ್ಷ ಜನರಿಗೆ ಸಿಗಬೇಕಾದ ಸವಲತ್ತುಗಳು ಒಬ್ಬ ಫಲಾನುಭವಿ ತೆಗೆದುಕೊಳ್ಳುತ್ತಿರುವ ಪ್ರಕರಣ ನಡೆಯುತ್ತಿದೆ. 1 ಲಕ್ಷ ಫಲಾನುಭವಿ ಪಡೆಯುವ ಸವಲತ್ತನ್ನು ಒಬ್ಬನೇ ಫಲಾನುಭವಿ ವಿಎಸ್ಎಸ್ಎನ್‌ನಿಂದ ತೆಗೆದುಕೊಳ್ಳುತ್ತಿದ್ದಾನೆಂದು ಮಂತ್ರಿಗಳು ಹೇಳಿದ್ದಾರೆ. ಸಹಕಾರ ಮಂತ್ರಿಗಳು ಮಂತ್ರಿಗಳಾದ ಎರಡೇ ದಿವಸಕ್ಕೆ ಇಂಥ ಪ್ರಕರಣವನ್ನು ಬಯಲಿಗೆಳೆದಿರುವುದನ್ನು ನಾನು ಮೊದಲನೆಯದಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದು ಯಾವ ಪ್ರಕರಣವೆನ್ನುವುದನ್ನು ದಯಮಾಡಿ ಸದನದ ಮುಂದೆ ತಿಳಿಸುವುದು, 1 ಲಕ್ಷ ಫಲಾನುಭವಿ ಪಡೆಯುವ ಸವಲತ್ತನ್ನು ಒಬ್ಬನೇ ಫಲಾನುಭವಿ ಪಡೆದಿದ್ದಾನೆ ಎನ್ನುವುದನ್ನು ಸದನದ ಗಮನಕ್ಕೆ ದಯಮಾಡಿ ತರಬೇಕು. ಎರಡನೆಯದಾಗಿ ನಮ್ಮ ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ಸಾಕಷ್ಟು ಅವ್ಯವಹಾರಗಳು ನಡೆಯುತ್ತಿವೆ. ಅದರಲ್ಲೂ ಮುಖ್ಯವಾಗಿ ನಿವೇಶನ ನೀಡುವುದಾಗಿ ಹಣ ವಸೂಲ್ಮಾಡಿ ವಂಚಿಸುವುದು ಹೆಚ್ಚಾಗಿದೆ. ತಾವು ಹಿಂದೆ ಅನೇಕ ಗೃಹ ನಿರ್ಮಾಣ ಸಹಕಾರಿ ಸಂಘಗಳ ಬಗ್ಗೆ ಅಧ್ಯಯನ ಮಾಡಿದ ಅನುಭವ ನಿಮಗಿದೆ. ಆದುದರಿಂದ, ದಯಮಾಡಿ, ಅವು ಯಾವ ನಿವೇಶನ ಸಹಕಾರ ಸಂಘಗಳು ಅದರ ಬಗ್ಗೆ ನಾನು ಸ್ವಲ್ಪ ಮಾಹಿತಿಯನ್ನು ಕೊಡುತ್ತೇನೆ, ನೀವು ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇನ್ನು ಕೆಎಂಎಫ್ ಹೇಳಿದ್ದೀರಿ, ಇವತ್ತು ರಾಜ್ಯದಲ್ಲಿ 21 ಜಿಲ್ಲಾ ಬ್ಯಾಂಕುಗಳಿವೆ. ಇವುಗಳಿಂದ ಸುಮಾರು 17,99,978 ಫಲಾನುಭವಿಗಳಿಗೆ, ಅಂದರೆ ಅಲ್ಪಾವಧಿ ಸಾಲ, ಸುಮಾರು 5,400 ಕೋಟಿ 1.4.2011 ರಿಂದ 31.3.2012 ರವರೆಗೆ 21 ಜಿಲ್ಲಾ ಬ್ಯಾಂಕಿನಲ್ಲಿ ನೀವು ಕೊಟ್ಟಿದ್ದೀರಿ. ಅದೇ ರೀತಿ ಮಧ್ಯಮಾವಧಿ ಸಾಲ ಏನು

300 ಕೋಟಿ ರೂಪಾಯಿಗಳ ನ್ನಿಟ್ಟಿದ್ದೀರಿ, ಅದರಲ್ಲಿ ಸುಮಾರು 1900 ಚಿಲ್ಲರೆ ಕೋಟಿ ಸಾಲವನ್ನು ಕೊಟ್ಟಿದ್ದಾರೆ. ಇದೆಲ್ಲಾ ಸೇರಿ ಸುಮಾರು 5874 ಕೋಟಿಯನ್ನು 1.4.2011 ರಿಂದ 31.3.2012ರವರೆಗೆ 21 ಜಿಲ್ಲಾ ಬ್ಯಾಂಕು ಗಳಲ್ಲಿ ಸಾಲ ಕೊಟ್ಟಿದ್ದೀರಿ. ಆ 21 ಬ್ಯಾಂಕುಗಳಲ್ಲಿ ಯಾವ ಬ್ಯಾಂಕು 1 ಲಕ್ಷ ಫಲಾನುಭವಿಗಳಿಗೆ ಕೊಡುವ ಸವಲತ್ತುಗಳನ್ನು ಒಬ್ಬನೇ ಫಲಾನುಭವಿಗೆ ಕೊಡಲಾಗಿದೆ ಎನ್ನುವ ಮಾಹಿತಿ ನನಗೆ ಬೇಕಾಗಿದೆ, ಅದನ್ನು ಈ ಸಭೆಯ ಮುಂದಿಡಬೇಕಾಗಿದೆ. 1 ಲಕ್ಷ ಫಲಾನುಭವಿಗಳ ಸವಲತ್ತನ್ನು ಒಬ್ಬರೇ ಪಡೆದಿರುವ ಆ ಕುಳ ಯಾರು? ಅದನ್ನು ದಯಮಾಡಿ ಸದನದ ಮುಂದೆ ಇಡಬೇಕಾಗುತ್ತದೆ. ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಯವರು 3500 ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದ್ದಾರೆ. ನಾವು ಇನ್ನೊಂದು ಬೇಡಿಕೆಯನ್ನು ಇಟ್ಟಿದ್ದೇವೆ, ಸನ್ಮಾನ್ಯ ಯಡಿಯೂರಪ್ಪನವರು ಹೇಳಿದ್ದಕ್ಕೆಲ್ಲಾ ನಾವು ಸಹಕಾರ ಮಾಡಿದ್ದೇವೆ. 1.4.2011 ರಿಂದ ಸಾಲ ಮನ್ನಾ ಮಾಡಬೇಕೆನ್ನುವುದಕ್ಕೆ ತಾವು ಒಪ್ಪಿದ್ದೀರಿ, ಇನ್ನು 50–60 ಕೋಟಿ ರೂಪಾಯಿಗಳು ಜಾಸ್ತಿಯಾಗಬಹುದು. ಇದರಲ್ಲಿ ಇವತ್ತು ಜಿಲ್ಲಾ ಬ್ಯಾಂಕುಗಳಲ್ಲಿ 5400 ಕೋಟಿ ರೂಪಾಯಿಗಳನ್ನು ಸುಮಾರು 18 ಲಕ್ಷ ಫಲಾನುಭವಿಗಳಿಗೆ ಕೊಟ್ಟಿದ್ದೀರಿ. 18 ಲಕ್ಷ ಫಲಾನುಭವಿಗಳಲ್ಲಿ 1 ಲಕ್ಷ ಫಲಾನುಭವಿದು ಇದು ಒಂದು ಭಾಗ. ಎರಡನೆಯದು ಗೃಹ ನಿರ್ಮಾಣ ಸಹಕಾರ ಸಂಘ. ನಮ್ಮ ರಾಜ್ಯದಲ್ಲಿ 1500 ಗೃಹ ನಿರ್ಮಾಣ ಸಹಕಾರ ಸಂಘಗಳಿವೆ. ಅದರಲ್ಲಿ ಕಾರ್ಯನಿರತ ಸುಮಾರು ಗೃಹ ನಿರ್ಮಾಣ ಸಹಕಾರ ಸಂಘಗಳು ಎಷ್ಟು, 1100 ಸಂಘಗಳು ಇವತ್ತು ಕಾರ್ಯ ಮಾಡುತ್ತಿವೆ, ಇನ್ನು ಉಳಿದ 400 ಸಂಘಗಳು ಕಾರ್ಯ ಮಾಡುತ್ತಿಲ್ಲವೆನ್ನುವ ಒಂದು ಮಾಹಿತಿ ಇದೆ. ಇನ್ನು ಪಾವತಿಯಾಗಿ ಷೇರು ಬಂಡವಾಳ, 1500 ಸಂಘಗಳಲ್ಲಿ ಷೇರು ಬಂಡವಾಳ 500 ಕೋಟಿ ರೂಪಾಯಿಗಳಿರಬಹುದು. ಸುಮಾರು 1100 ಸಂಘಗಳು ಇವತ್ತು ಕೆಲಸ ಮಾಡುತ್ತಿದ್ದು, ಸುಮಾರು 3 ಲಕ್ಷ ನಿವೇಶನ ಗಳನ್ನು ಇವತ್ತು ಮಾಡಿದ್ದಾರೆ. ಮಾನ್ಯ ಕೃಷ್ಣ ಭೈರೇಗೌಡರು ಮೊನ್ನೆ ಕೇಳಿದ ಪ್ರಶ್ನೆಗೆ ಉತ್ತರವನ್ನು 15 ದಿವಸ ನಂತರ ಕೊಡಿಸುತ್ತೇನೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದೀರಿ. ನಾನು ಮಾನ್ಯ ಸಹಕಾರಿ ಸಚಿವರಲ್ಲಿ ಮಾಡುವುದಿಷ್ಟೆ, 1100 ಸಂಘಗಳು ಏನು ಕಾರ್ಯನಿರ್ವಹಿಸುತ್ತಿದ್ದಾವೆ, ಅವುಗಳಲ್ಲಿ ಎಷ್ಟು ಸಂಘಗಳ ಮೇಲೆ ಎನ್‌ಕ್ವೈರಿ ನಡೆಯುತ್ತಿದೆ? ಈಗಾಗಲೇ ಅಧ್ಯಯನ ಮಾಡಿದ್ದೀರಿ, ನೀವೇ ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದೀರಿ, 64ರ

ವಿಚಾರಣೆ ನಡೆಯುತ್ತಿರಬೇಕಾದರೆ ಯಾವಾಗ ಈ ವಿಚಾರಣೆ ಆರಂಭ ವಾಯಿತು, ಯಾವಾಗ ಅದು ಮುಗಿಯುತ್ತದೆ, ವಿಚಾರಣೆಯನ್ನು 6 ತಿಂಗಳಲ್ಲಿ ಮಾಡಬೇಕೋ, 3 ತಿಂಗಳಲ್ಲಿ ಮಾಡಬೇಕೋ, 1 ವರ್ಷದಲ್ಲಿ ಮಾಡಬೇಕೋ ಅಥವಾ 2 ವರ್ಷ ಇಟ್ಟಿದ್ದೀರೋ, ದಯಮಾಡಿ ತಿಳಿಸಬೇಕಾಗುತ್ತದೆ. ಒಂದನ್ನು ಉದಾಹರಣೆಗೆ ಹೇಳಬೇಕಾದರೆ, ನನಗಿರುವ ಮಾಹಿತಿಯ ಪ್ರಕಾರ 1100 ರಲ್ಲಿ ನಿಮಗೆ 10 sample ಕೊಡುತ್ತೇನೆ, ಅದನ್ನು ನೀವು ನೋಡಿ. ಒಂದು ವಾಣಿಜ್ಯ ಸಚಿವಾಲಯ ಗೃಹನಿರ್ಮಾಣ ಸಂಘ, ಇದರ 64 ರ enquiry ನಡೆಯುತ್ತಿದೆಯೋ ಇಲ್ಲವೋ ಯಾವಾಗ ಪಾರಂಭವಾಯಿತು, ಯಾವಾಗ ಮುಗಿಯಿತು, ಎಷ್ಟು ದಿವಸ ಬೇಕು, ಅದಕ್ಕೆ time limit ಎಷ್ಟು ಹಾಕಿದ್ದೀರಿ, ಕಾರಣ ಏಕೆ ಕೊಟ್ಟಿಲ್ಲ? ಅದೇ ರೀತಿ ಮೊನ್ನೆ NTI ಗೃಹ ನಿರ್ಮಾಣ ಸಹಕಾರ ಸಂಘ, ಮಾನ್ಯ ಕೃಷ್ಣ ಬೈರೇಗೌಡರು ಪ್ರಶ್ನೆ ಮಾಡಿದ್ದರೆ, ಅದಕ್ಕೆ ಉತ್ತರ ನೀಡಲು 15 ದಿವಸ ಮುಂದೂಡಲಾಗಿದೆ ಎಂದು ತಿಳಿಸಲಾಯಿತು. ನನಗಿರುವ ಮಾಹಿತಿಯನ್ನು ಅವರ ಗಮನಕ್ಕೆ ತರುತ್ತಿದ್ದೇನೆ, ಅವರು ಎರಡೇ ದಿವಸದಲ್ಲಿ ಮತ್ತು ಹಿಂದೆಯು ಅಧ್ಯಯನ ಮಾಡಿದ್ದಾರೆ, ಅವರಿಗೆ ಸಹಕಾರಿಯಾಗಲೆನ್ನುವ ದೃಷ್ಟಿಯಿಂದ ಇದನ್ನು ಕೊಡುತ್ತಿದ್ದೇನೆ. NTI ಗೃಹ ನಿರ್ಮಾಣ ಸಂಘವು ಬೆಂಗಳೂರು ನಗರ ಜಿಲ್ಲೆಯಲ್ಲಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಕೊಡಿಗೆ ಹಳ್ಳಿ ಮತ್ತು ಬ್ಯಾಟರಾಯನಪುರ ಗ್ರಾಮದ ಸುತ್ತಮುತ್ತಲಿನ, ಅದರ ಬಡಾವಣೆಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ಪಾಲಿಸದೇ ನಿವೇಶನ ಸದಸ್ಯತ್ವ ಹಂಚಿಕೆದಾರರ ಜ್ಯೇಷ್ಠತಾ ಪಟ್ಟಿಯ ಬಗ್ಗೆ ಇಲಾಖೆಯು ಸರಿಯಾದ ಮಾಹಿತಿಯನ್ನು ಕೊಟ್ಟಿರುವುದಿಲ್ಲ. ನೀವು ಸರಿಯಾಗಿ ಮಾಹಿತಿಯನ್ನು ತರುವವರೆಗೂ ಇದನ್ನು ಮುಂದೂಡಲಾಗಿದೆಯೆಂದು ಹೇಳಿದ್ದಿರಿ. ಮಾನ್ಯ ಸದಸ್ಯರಾದ ಶ್ರೀ ಕೃಷ್ಣಬೈರೇಗೌಡರು ಸಂಘಕ್ಕೆ ಸಂಬಂಧಿಸಿದ ಕಡತವನ್ನು ತರಿಸಿದರೆ ಅರ್ಧಗಂಟೆ ಕಾಲದೊಳಗೆ ನಿಮ್ಮ ಛೇಂಬರ್‌ನಲ್ಲಿಯೇ ಕುಳಿತು ಐದೇ ನಿಮಿಷದಲ್ಲಿ ಮಾಡಿಕೊಡುತ್ತೇನೆಂದು ಹೇಳಿದ್ದರು. ಸಂಘದವರು ಆ ರೀತಿ ಕಡತ ತರುವುದಕ್ಕೆ ಆಗುವುದಿಲ್ಲವೆಂದು ಹೇಳಿದರು. ಅವರು ಅಧ್ಯಯನ ಮಾಡಿರುವುದು ಒಂದು ಕಡೆ. ಸದನದ ಗೌರವಾನ್ವಿತ ಸದಸ್ಯರಾದ ಕೃಷ್ಣ ಬೈರೇಗೌಡರು ಈ ಸದನಕ್ಕೆ ಮೂರು ಬಾರಿ ಆಯ್ಕೆಯಾಗಿ ಬಂದಿದ್ದಾರೆ. ಮೂರು ಬಾರಿ ಆಯ್ಕೆಯಾಗಿ ಬಂದರೂ, ಐದು ನಿಮಿಷದಲ್ಲಿ ಹುಡುಕಿಕೊಡು

ತ್ತೇನೆಂದರೆ ಇವರಿಗೇನು ತೊಂದರೆ? ರಾಜ್ಯದಲ್ಲಿ ವಿಧಾನ ಸೌಧದಲ್ಲಿ ಕೆಲಸ ಮಾಡುವವರಿರಬಹುದು, ಬಡವರಿರಬಹುದು, Second Division Clerk ಇರಬಹುದು ಅವರು ನಮಗೆ ಒಂದು ನಿವೇಶನವನ್ನು ಕೊಡಿ, ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಿ, ಒಂದು ಹೊತ್ತು ಅನ್ನವನ್ನು ಕೊಡಿ ಎಂದು, ಈ ಮೂರನ್ನು ಬಿಟ್ಟರೆ ಇನ್ನೇನು ಅವರು ಕೇಳುತ್ತಾರೆ? ಈ NTI ಗೃಹ ನಿರ್ಮಾಣ ಸಂಘ ಪ್ರಾರಂಭವಾಗಿದ್ದು 20.9.1995 ರಂದು, ಅಂದರೆ 17 ವರ್ಷವಾಯಿತು. NTI ಗೃಹ ನಿರ್ಮಾಣ ಸಂಘ ಪ್ರಾರಂಭವಾಗಿ 17 ವರ್ಷವಾದರೂ ಪರಿಶೀಲಿಸಿ ಸರಿಯಾದ ಕ್ರಮ ಕೈಗೊಳ್ಳುವುದಕ್ಕೆ ಇಷ್ಟು ಸಮಯ ಬೇಕೇ? ಸಂಘವು ಜ್ಯೇಷ್ಠತೆಯನ್ನು ಅನುಸರಿಸದೇ ಹೊಸ ಸದಸ್ಯರಿಗೆ ನಿವೇಶನವನ್ನು ಹಂಚಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದ ಪಕ್ಷದಲ್ಲಿ, ಇದರಲ್ಲಿ ನಿಯಮ ಮತ್ತು ಪ್ರಕ್ರಿಯೆಗಳ ಉಲ್ಲಂಘನೆಯಾಗಿರುತ್ತದೆಯೇ? ಇದರ ಬಗ್ಗೆ ಕೇವಲ ಐದು ನಿಮಿಷದಲ್ಲಿ ಉತ್ತರ ಹೇಳುತ್ತೇನೆಂದು ಮಾನ್ಯ ಸದಸ್ಯರಾದ ಕೃಷ್ಣ ಬೈರೇಗೌಡರು ಹೇಳಿದರೂ ಅದಕ್ಕೂ ಉತ್ತರವಿಲ್ಲ. ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರದ ಮೂಲ ಉದ್ದೇಶವೆಂದರೆ. . . . .

ಶ್ರೀ ಬಿ.ಜೆ. ಪುಟ್ಟಸ್ವಾಮಿ (ಮಾನ್ಯ ಸಹಕಾರ ಸಚಿವರು) : I am on a point of order.

(ಗೊಂದಲ)

ಅಧ್ಯಕ್ಷರು : ಅವರು point of order ಎಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ : ಅದೇನು point of order ಹೇಳುತ್ತಿರೋ ಹೇಳಿ.

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಇವತ್ತು ಅಜೆಂಡಾದಲ್ಲಿರುವ ವಿಷಯ ವೇನು, ಇವರು ಯಾವುದೋ ಒಂದು individual ಸೊಸೈಟಿ ಬಗ್ಗೆ ಚರ್ಚೆ ಮಾಡುತ್ತಿರುವುದಕ್ಕೆ ನಾನು ಉತ್ತರ ಹೇಳಬೇಕೇ ಮತ್ತು ಇದು ಸರೀನಾ? ಅಜೆಂಡಾದಲ್ಲಿ ಏನು ವಿಚಾರ ಕೇಳಿದ್ದಾರೆ ಅದರ ಬಗ್ಗೆ ಉತ್ತರ ಹೇಳಬಹುದು. ಎರಡಕ್ಕೂ ಹೇಳಬೇಕೆಂದರೆ ಎಲ್ಲದಕ್ಕೂ ಉತ್ತರ ಹೇಳುತ್ತೇನೆ. I am prepared. ನೀವು ನೋಟಿಸ್ ಕೊಡಿ. ಅದಕ್ಕೆ ಮಾನ್ಯ ಅಧ್ಯಕ್ಷರು ಒಂದು ದಿವಸ ಕಾಲಾವಕಾಶ ಕೊಡಲಿ, ಅದಕ್ಕೆ ಇಡೀ ದಿವಸ ಉತ್ತರ

ಹೇಳುತ್ತೇನೆ. I am prepared, ಹರಿಕಥೆ ಬೇಡ. ಅವರು ಹೇಳುವುದೊಂದು ಕೇಳುವುದೊಂದು. . . . .

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ : ನೋಟಿಸ್‌ನಲ್ಲಿ ಎಲ್ಲಾ ಇದೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಮೊದಲು yield ಆಗಬೇಕು.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ನಾನು point of order ಕೇಳಿದ್ದೇನೆ. ಅಜೆಂಡಾದಲ್ಲಿರುವುದನ್ನು ಮಾತ್ರ ಮಾತನಾಡಬೇಕು.

(ಗೊಂದಲ)

ಅಧ್ಯಕ್ಷರು : ನಿಯಮ 69 ರಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ದಯಮಾಡಿ ಮಂತ್ರಿಗಳು ನಾನು ಹೇಳುವುದನ್ನು ಕೇಳುವುದಕ್ಕೆ ಹೇಳಿ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಸದನದ ರೂಲ್‌ನಲ್ಲಿದ್ದರೆ ಎಲ್ಲವನ್ನೂ ಚರ್ಚೆ ಮಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಿಯಮ 60ರ ಅಡಿಯಲ್ಲಿ ನಾನು ಕೊಟ್ಟಿರುವುದೇನೆಂದರೆ ಮಾನ್ಯ ಮಂತ್ರಿಗಳು 17.7.2012 ರ ದಿನ ಪತ್ರಿಕೆಯಲ್ಲಿ ಮಂತ್ರಿಯಾದ ಎರಡು ದಿನದಲ್ಲೇ ತಾವು ಹೇಳಿದ ಮೇಲೆ ಅದರಿಂದ ರಾಜ್ಯದ. . . . .(ಗೊಂದಲ) ನೀವು ಪತ್ರಿಕಾ ಹೇಳಿಕೆ ಯನ್ನು ಕೊಡದಿದ್ದರೆ ಹೇಳುತ್ತಿರಲಿಲ್ಲ. ದಯವಿಟ್ಟು ನಾನು yield ಆಗುವುದಿಲ್ಲ.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ : ಸಹಕಾರ ಸಂಘಗಳಲ್ಲಿ ದುರುಪಯೋಗ ಎಂದು ಸ್ಪಷ್ಟವಾಗಿ ಅಜೆಂಡಾದಲ್ಲಿ ನಮೂದಿಸಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಚಿವರೇ ಹೇಳಿಕೆಯನ್ನು ಕೊಟ್ಟಿರುವುದು. ಯಾರು ಕ್ರಿಮಿನಲ್ ಮಾಡಿದ್ದಾರೆ. . . . .

(ಗೊಂದಲ)

ಅಧ್ಯಕ್ಷರು : ನೀವು ಮಾತನಾಡಿ. ಕೃಷ್ಣ ಬೈರೇಗೌಡರೇ, ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಚಿವರೇ ನೀವು ಬಂದು ಎರಡೇ ದಿನಕ್ಕೆ ಅವ್ಯವಹಾರ ಮಾಡುತ್ತಿದ್ದಾರೆಂದು ಹೇಳುತ್ತಿಲ್ಲ.

(ಗೊಂದಲ)

SRI KRISHNA BYREGOWDA : Why yhe Hon'ble Minister is so agitated?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನಿಮಗೆ ಒಳ್ಳೆಯದಾಗಲಿ, ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಬೇಡವೆಂದರೆ ಬಿಡಿ, ಅವರು ಬಂದ ಎರಡು ದಿನಗಳಲ್ಲೇ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದರಿಂದ ಅವರಿಗೆ ಅನುಕೂಲವಾಗುವಂತೆ additional ಆಗಿ ಕೆಲವು supported document ಕೊಡುತ್ತಿದ್ದೇನೆ. ದಯವಿಟ್ಟು ನೀವು ಕೇಳಿಸಿಕೊಳ್ಳಿ. ಎರಡನೇ point, ಮಾನ್ಯ ಅಧ್ಯಕ್ಷರೆ, ಅಂತಹ ಸಂಘಗಳಿಗೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವ ಸರ್ಕಾರದ ಮೂಲ ಉದ್ದೇಶ, ಹೊಸ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡುವುದರಿಂದ ಮೂಲ ಸದಸ್ಯರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ ಎಂದು ಅವರು ಕೇಳಿರುವುದು. ಈ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ 15 ದಿವಸದೊಳಗೆ ಕಡತ ಬರುತ್ತದಲ್ಲವೇ? ಕಡತ ಬಂದಾಗ additional ಆಗಿ ಅಂಶಗಳೆಲ್ಲವೂ ನಿಮಗೆ ಅನುಕೂಲವಾಗಲಿ ಎಂದು ಹೇಳುತ್ತಿದ್ದೇನೆ. ಬೇರೆ ಯಾವ ಉದ್ದೇಶದಿಂದಲೂ ಹೇಳುತ್ತಿಲ್ಲ. 173 ಎಕರೆ 29 ಗುಂಟೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು, 2004 ರಲ್ಲಿ 10 ಎಕರೆ ಜಮೀನನ್ನು ಯಾರಿಗೋ ಕೊಡುತ್ತಾರೆ, ಅದನ್ನು ಯಾವ ರೀತಿ ಕೊಡುತ್ತಾರೆ, ಯಾರಿಗೆ ಕೊಟ್ಟರು ಎಂಬ ಬಗ್ಗೆ ತನಿಖೆ ಮಾಡುತ್ತಾರೆಯೇ? 10 ಎಕರೆ ಭೂಮಿಯನ್ನು ಯಾರಿಗೆ ಕೊಟ್ಟರು, ಕಾನೂನಿನ ನಿಯಮದ ಡಿಯಲ್ಲಿ ನಿಯಮಾವಳಿಗಳ ಪ್ರಕಾರ ಕೊಡುವುದಕ್ಕೆ ಅವಕಾಶವಿದೆಯೇ?

ಎಂಬ ಬಗ್ಗೆ ದಯಮಾಡಿ ಹೇಳಿ. 161 ಎಕರೆ ಭೂಮಿಗೆ ಬಿ.ಡಿ.ಎ. ಯಿಂದ plan approve ಆಗುತ್ತದೆ. 2004 ರಲ್ಲಿ ಅಪ್ರೂವಲ್ ಆಗಿ ಇಲ್ಲಿಗೆ ಸುಮಾರು 8 ವರ್ಷಗಳ ಕಾಲವಾಯಿತು. ಬಿ.ಡಿ.ಎ. ಯಿಂದ approval ಕೊಟ್ಟು, Plan approve ಆಗಿ 8 ವರ್ಷವಾದರೂ ನಿವೇಶನಕ್ಕಾಗಿ ಅರ್ಜಿ ಹಾಕಿದಂತಹವರಿಗೆ ನಿಜವಾಗಿಯೂ ನೀವು ನಿವೇಶನ ಕೊಟ್ಟಿದ್ದೀರ ಎಂಬುದನ್ನು ಮಾನ್ಯ ಸದಸ್ಯರು ಪ್ರಶ್ನೆ ಮಾಡುತ್ತಾರೆ. ಇದನ್ನು ಮಾಡುವುದಕ್ಕೆ 8 ವರ್ಷ ಬೇಕೇ? NTI ಗೃಹ ನಿರ್ಮಾಣ ಸಂಘದ ಬಗ್ಗೆ 64 enquiry ಮಾಡುತ್ತಿದ್ದೀರಿ. ಮಾಹಿತಿ ಪ್ರಕಾರ ಹೇಳುತ್ತಿದ್ದೇನೆ. ಬೇರೆ ಯಾವುದನ್ನು ಹೇಳುತ್ತಿಲ್ಲ. 15.1.2012 ರಲ್ಲಿ 64 enquiry ಮಾಡುತ್ತೀರಿ, ಇಲ್ಲಿಯವರೆಗೆ 6 ತಿಂಗಳಾಗಿದೆ. Straightaway ಹೋಗುತ್ತಾರೆ, ಆಮೇಲೆ ಏನು ಮಾಡುತ್ತಾರೆಂದು ನಾನು ಆ ನಂತರ ಹೇಳುತ್ತೇನೆ. 64 enquiry ಆಗಿ ಇಷ್ಟು ದಿನಗಳಾದರೂ ಇವರು ಏನು ಮಾಡಿದರು? ಏನು ಕ್ರಮ ತೆಗೆದುಕೊಂಡಿದ್ದಾರೆ? 1995ರಲ್ಲಿ ಜಮೀನು acquire ಆಗಿ ಇಲ್ಲಿಯವರೆಗೆ ಏಕೆ ಮಾಡಿಲ್ಲ, ಇದಕ್ಕೆ ಕಾರಣವೇನು? ನಿಜವಾಗಿರುವಂತಹ ಸದಸ್ಯರುಗಳಿಗೆ ನಿವೇಶನ ಕೊಟ್ಟಿದ್ದಾರೆಯೇ? ಸಭೆಯ ಮುಂದೆ ಹೇಳಿ, ಯಾರು ಇದಕ್ಕೆ ಜವಾಬ್ದಾರರು? 64 enquiry ಮಾಡಬೇಕಾದರೆ ಎಷ್ಟು ದಿನಗಳ ಕಾಲ ನಿಗದಿ ಮಾಡಿದ್ದೀರಾ? ಈ ಸಂಘದ ಯಾರ್‍ಯಾರು ಸದಸ್ಯರುಗಳಿಗೆ Site ಕೊಟ್ಟಿದ್ದೀರಿ? Seniority ಮೇಲೆ ಕೊಡದೇ ಹೋದರೆ ಏನು ಕ್ರಮ ಕೈಗೊಳ್ಳುತ್ತೀರಿ? ಸಂಘದ ಅಧ್ಯಕ್ಷರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೀರಾ ಅಥವಾ ಇಲ್ಲವಾ ಎನ್ನುವುದನ್ನು ದಯಮಾಡಿ ತಿಳಿಸಬೇಕು. ಈ ಒಂದು ಸೊಸೈಟಿಯ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. NTI ಗೃಹ ನಿರ್ಮಾಣ ಸಹಕಾರ ಸಂಘವು 10 ಎಕರೆ ಭೂಮಿ ಯನ್ನು ಯಾರಿಗೆ ಕೊಟ್ಟರು, ಏನು ಮಾಡಿದರು ಎಂಬುದನ್ನೆಲ್ಲಾ ತನಿಖೆ ಮಾಡಿ ಸಭೆಯ ಮುಂದೆ ಇಡುತ್ತಾರಾ ಅಥವಾ ಇಲ್ಲವೇ ಎಂಬುದನ್ನು ದಯಮಾಡಿ ಹೇಳಿ. ಮಾನ್ಯ ಅಧ್ಯಕ್ಷರೇ ಎರಡನೆಯದಾಗಿ ಕರ್ನಾಟಕ ವಿಧಾನ ಮಂಡಲ ಕಾರ್ಯಾಲಯದ ಗೃಹ ನಿರ್ಮಾಣ ಸಹಕಾರ ಸಂಘ, ರಾಜ್ಯಕ್ಕೆ ಒಂದು ಸಂದೇಶ ಕೊಡುವಂತಹ ವಿಧಾನ ಮಂಡಲವಿದೆಯೆಲ್ಲಾ, ಆ ವಿಧಾನ ಮಂಡಲದ ಸಂಘಕ್ಕೆ 64 enquiry ಆದೇಶ ಮಾಡಿದ್ದೀರಿ. ಈ ರಾಜ್ಯದ 6 ಕೋಟಿ ಜನತೆಗೆ ಸಂದೇಶ ಕೊಡುವಂತಹ ಒಂದು ಸದಸ್ಯರ ಸಂಘ

ಇದೆಯೆಲ್ಲಾ ಅದರ ಮೇಲೂ 64 enquiry ಇದೆ. ಆ enquiry ಏನಾಗಿದೆ? ಯಾವ ಸಮಯದಲ್ಲಿ ಹಾಗೂ ಯಾವ ಕಾರಣಕ್ಕಾಗಿ 64 enquiry ಮಾಡಿದಿರಿ? ಸಂಘದಲ್ಲಿ ಎಷ್ಟು ಜನಕ್ಕೆ ನಿವೇಶನ ಕೊಟ್ಟಿದ್ದಾರೆ?

ಆ ನಿವೇಶನ ಕೊಡುವಾಗ ಏನೇನು violation ಮಾಡಿದ್ದಾರೆ? Seniority ಬಿಟ್ಟು ಏನಾದರೂ ಮಾಡಿದ್ದಾರೆಯೇ? ಇದರಲ್ಲಿ ಕಾರಣರು ಯಾರು? ಅವರ ಮೇಲೆ criminal case ಹಾಕುತ್ತೀರಾ? ನೀವು ತಪ್ಪಿತಸ್ಥರ ವಿರುದ್ಧ criminal case ಆಗಬೇಕೆಂದು, ಅದಕ್ಕೆ ಒಂದು ಕಾಯಿದೆ ತರುತ್ತೇನೆಂದು ಹೇಳಿದಿರಿ. ತನ್ನಿ ಬಹಳ ಸಂತೋಷ. ಅದಕ್ಕೆ ನಾವು, ನಮ್ಮ ಪಕ್ಷ ಸಮ್ಮತಿ ಕೊಡುತ್ತೇವೆ. ಉದಾಹರಣೆಗೆ ವೈಯಾಲಿ ಕಾವಲ್ ಗೃಹ ನಿರ್ಮಾಣ ಸಂಘ, ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿ ಯಾಗಿದ್ದಾಗ ಆದೇಶ ಮಾಡುತ್ತಾರೆ. ಅವರು ಆದೇಶ ಮಾಡಿದ ಕಾಪಿಯನ್ನು ತಮ್ಮ ಮುಖೇನ ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ. "ದಿನಾಂಕ: 30.03.2007 ರಲ್ಲಿ ಪ್ರಧಾನ ಕಾರ್ಯದರ್ಶಿಯವರು ಒಳಾಡಳಿತ ಇಲಾಖೆ, ಇವರು, ಆರೋಪಗಳು ಗಂಭೀರವಾಗಿದ್ದು, ಆರೋಪಗಳ ಪ್ರಮಾಣ, ವೈಯಕ್ತಿಕ ವಿವರ, ನಡೆದಿರುವ ಆರೋಪವು ಸೇರಿ ಉನ್ನತ ಮಟ್ಟದ ಅಧಿಕಾರಿಗಳು ಸೇರಿರುವ ಸಾಧ್ಯತೆಗಳಿರುವುದರಿಂದ, ಪ್ರಸ್ತಾಪಿಸಲಾಗಿರುವು ದರಿಂದ ಉನ್ನತ ಮಟ್ಟದ ದಕ್ಷ ಅಧಿಕಾರಿಯಿಂದ ಸಿಒಡಿ ತನಿಖೆ ಮಾಡಲು ಕೂಡಲೇ ಆದೇಶಿಸಿದ್ದು ಮೂರು ತಿಂಗಳಲ್ಲಿ ವರದಿ ಸಲ್ಲಿಸತಕ್ಕದ್ದು" ಎಂದು ಇದೆ. ಇದನ್ನು ತಮಗೆ ಕಳುಹಿಸಿಕೊಡುತ್ತೇನೆ. ಇದು 64 enquiry ಕೂಡ ಇದೆ.

ಅಧ್ಯಕ್ಷರು : ಸಚಿವರು ಆಮೇಲೆ ಉತ್ತರ ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಅದರಲ್ಲಿ ಅವರೇ ನಾದರೂ involve ಆಗಿದ್ದಾರಾ? ಏಕೆ ಐದ್ಸೈದು ನಿಮಿಷಕ್ಕೆ ಎದ್ದು ನಿಂತು ಕೊಳ್ಳುತ್ತೀರಿ? ನೀವು ಮಂತ್ರಿಗಳಾಗಿ ಬಂದು ಮೂರು ದಿನವಾಗಿದೆ. ನಾನು ದಾಖಲೆ ಸಹಿತ ಕೊಡುತ್ತೀನಲ್ಲ. ಅವರಿಗೆ ಸಹಕಾರಿಯಾಗಲಿ, ಅವರಿಗೆ ಅನುಕೂಲವಾಗಲಿ ಎಂದು . . .

ಅಧ್ಯಕ್ಷರು : ಈಗ ನೀವು ಕೇಳಿದ್ದು ಆ ಆಫೀಸರ್ಸ್ ಹೇಳಿಕೆ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನೋಡಿ, ಅವರು ಹೇಳಿದ್ದಕ್ಕೆ ನಾವು ಒಂದು ವಾರದಿಂದ ಕಾದಿಲ್ಲವೇ?

ಅಧ್ಯಕ್ಷರು : ಆಯಿತು, ನೀವು ಮಾತನಾಡಿ.

ಶ್ರೀ ಬಿ.ಜೆ. ಪುಟ್ಟಸ್ವಾಮಿ : ನನಗೂ ಹರಿಕಥೆ ಮಾಡುವುದಕ್ಕೆ ಬಿಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಗಂಭೀರ ವಾದಂತಹ ವಿಷಯಗಳನ್ನು ಚರ್ಚೆ ಮಾಡುತ್ತಿದ್ದು, ಹರಿಕಥೆ ಮಾಡುವುದಕ್ಕೆ ಬಂದಿಲ್ಲ. ಈ ರಾಜ್ಯದ ಐದು ಕೋಟಿ ಜನತೆಯ ವಿಚಾರ ಇದೆ. ನಾನು ಇಲ್ಲಿ ಹರಿಕಥೆ ಮಾಡುವುದಕ್ಕೆ ಬಂದಿಲ್ಲ. ನೀವು ಬೇಕಾದರೆ ಹರಿಕಥೆ ಮಾಡಿ. ನಾನು ಏಕೆ ಹರಿಕಥೆ ಮಾಡುವುದಕ್ಕೆ ಹೋಗಲಿ.

ಅಧ್ಯಕ್ಷರು : ಇದು matter ಅಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಈಗ ನಾನು ಹೇಳುತ್ತಿರುವ ಸಂಘ 64 enquiry ಇದೆಯೋ ಇಲ್ಲವೋ ಎಂದು ಬೇಕಿದ್ದರೆ ನೋಡಿ, ಇದು ನಿಮ್ಮ ಕಾಲದ್ದು ಅಲ್ಲ. ನಾನು 2007ರ ಕತೆ ಹೇಳುತ್ತಿದ್ದೇನೆ. ಮಾನ್ಯ ಸಹಕಾರ ಮಂತ್ರಿಗಳಿಗೆ ದಯಮಾಡಿ ಮನವಿ ಮಾಡುತ್ತೇನೆ. ನಿಮಗೆ ಅನುಕೂಲ ವಾಗಲಿ ಎಂದು ಕೊಡುತ್ತಿದ್ದೇನೆ. ಅನುಕೂಲವಾಗುವುದು ಬೇಡವೆಂದರೆ ಸುಮ್ಮನಿದ್ದು ಬಿಡುತ್ತೇನೆ. ನೀವು ಇಷ್ಟೊಂದು ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಹೊರಟಾಗ ನಾವು ನಿಮಗೆ support ಕೊಡಬಾರದೆ? ಈ ಮಾಹಿತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ನಾನು ಸಿಂಪಲ್ ಆಗಿ ಹೇಳುತ್ತೇನೆ. ವೈಯಾಲಿ ಕಾವಲ್ ಗೃಹ ನಿರ್ಮಾಣ ಸಹಕಾರ ಸಂಘ, ಬೆಂಗಳೂರು ಜಿಲ್ಲೆ, ಕೇಂದ್ರ ಬ್ಯಾಂಕ್, ಬೆಂಗಳೂರು ದಿನಾಂಕ: 23.12.1992 ಕಾನೂನು ಬಾಹಿರವಾಗಿ cash credit 14 ಕೋಟಿ 96 ಲಕ್ಷ ಪಡೆದಿರುವುದಕ್ಕೆ ಆಧಾರವಾಗಿ ನಾಗವಾರ ಗ್ರಾಮದ 146 ಎಕರೆ 26 ಗುಂಟೆ ಜಮೀನನ್ನು ಲೀಸ್ ಆಧಾರದ ಮೇಲೆ ಮಾಡಿರುತ್ತಾರೆ. ಅದನ್ನು ವೈಯಾಲಿ ಕಾವಲ್ ಗೃಹ ನಿರ್ಮಾಣ ಸಂಘ 92ರ ಸಾಲಿನಲ್ಲಿ ಪಡೆದಂತಹ 14 ಕೋಟಿ ಸಾಲವನ್ನು ತೀರಿಸದೆ DCC Bank ವಸೂಲಾತಿ ಅಧಿಕಾರಿಗಳು ದಿ: 23.12.99 ರಂದು ಬ್ಯಾಂಕಿಗೆ ಆಧಾರವಿಲ್ಲದ ಜಮೀನನ್ನು ಕರ್ನಾಟಕ ಸರ್ಕಾರ ಕಾಯಿದೆ ಅವಾರ್ಡ್ ಅಮುಲ್ ಜಾರಿ ಅರ್ಜಿಗಳನ್ನು ಪಡೆದು ಅರ್ಜಿ ಇಡುತ್ತಾರೆ. ಆ ಸಹಕಾರ ಸಂಘಕ್ಕೆ ಅಸಲು, ಬಡ್ಡಿ ಸೇರಿ ಸದರಿ ಸಂಘವು ಜಿಲ್ಲಾ ಸಹಕಾರಿ ಬ್ಯಾಂಕ್‌ಗೆ ಒಟ್ಟಿಗೆ ಕೊಡಬೇಕಾದ ಹಣ 42 ಕೋಟಿ 79 ಲಕ್ಷ ರೂಪಾಯಿಗಳು. 14 ಕೋಟಿ ರೂಪಾಯಿಯನ್ನು DCC Bank ನಲ್ಲಿ ಸಾಲ ತೆಗೆದುಕೊಳ್ಳುತ್ತಾರೆ. ಅದು 42 ಕೋಟಿ ರೂಪಾಯಿಯಾಗುತ್ತದೆ. 92ನೇ

ಸಾಲಿನಿಂದ 2000 ಇಸವಿಯವರೆಗೂ ಕಟ್ಟುವುದಿಲ್ಲ. ಇದರ ಮೇಲೆ ಏನೇನಾಗಿದೆ ಎಂದು ತಮ್ಮ ಕಡೆ ಕಳುಹಿಸಿಕೊಡುತ್ತೇನೆ, ಇದನ್ನು ಆಮೇಲೆ ತಾವು ತೆಗೆದುಕೊಂಡು ನೋಡಿ. ನಾನು ಒಂದೊಂದಾಗಿ ಕಡತವನ್ನು ಕಳುಹಿಸಿ ಕೊಡುತ್ತೇನೆ. ಅಮರಜ್ಯೋತಿ ಗೃಹನಿರ್ಮಾಣ ಸಂಘ, Aircraft ನೌಕರರ ಗೃಹ ನಿರ್ಮಾಣ ಸಂಘ, BEML ಗೃಹ ನಿರ್ಮಾಣ ಸಂಘ, ಮೈಸೂರು ವಿಶ್ವವಿದ್ಯಾನಿಲಯ ಗೃಹನಿರ್ಮಾಣ ಸಂಘ. Regional Engineering College ಗೃಹನಿರ್ಮಾಣ ಸಂಘ. ಮೈಸೂರು ಚಾಮರಾಜನಗರ ಶಿಕ್ಷಕರ ಗೃಹನಿರ್ಮಾಣ ಸಂಘ, ವೈಯಾಲಿ ಕಾವಲ್ ಸಂಘ ಸೇರಿ ನೀವು ಹತ್ತು ಸಂಘಗಳಿಗೆ 64 enquiry ಮಾಡಿದ್ದೀರಿ. 1,100 ಸಂಘ ಏನು ಇವತ್ತು ಕೆಲಸ ಮಾಡುತ್ತಿದೆ, ಅದರಲ್ಲಿ ಹತ್ತು ಸಂಘಗಳನ್ನು 64 enquiry ಮಾಡಿದ್ದೀರಿ. ಆದರೆ ಯಾವಾಗ ಈ ಹತ್ತು ಸಂಘಕ್ಕೆ 64 enquiry ಮಾಡಿದಿರಿ? ಎಷ್ಟು ದಿನದಲ್ಲಿ ಮುಗಿಯಬೇಕಾಗಿತ್ತು? ನೀವು ಏಕೆ ಮುಗಿಸಿಲ್ಲ? 64 enquiry ಏನಿದೆ? ದಯಮಾಡಿ ನೀವು ಸಭೆಯ ಮುಂದೆ ಇಡಬೇಕು.

ಅಧ್ಯಕ್ಷರು : ದಯವಿಟ್ಟು conclude ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನೀವು ಬೇರೆ ವಿಷಯಕ್ಕೆ ಸಮಯ ಕೊಡುತ್ತೀರಿ. ಇವತ್ತು ಬೆಳಿಗ್ಗೆಯಿಂದ RTE ಬಗ್ಗೆ ಚರ್ಚೆ ಮಾಡುವುದಕ್ಕೆ ಸಮಯ ಕೊಟ್ಟಿದ್ದೀರಿ. ಇದು ರಾಜ್ಯದಲ್ಲಿರುವ ಸಹಕಾರಿ ಸಂಘಗಳ ವಿಚಾರ.

ಅಧ್ಯಕ್ಷರು : ನೀವು 64 enquiry ಏನಿದೆ, ಅಷ್ಟಕ್ಕೆ ಸೀಮಿತ ಮಾಡಿಕೊಂಡರೆ ಒಳ್ಳೆಯದಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಒಳ್ಳೋಳ್ಳೆಯ ಕೆಲಸ ಮಾಡುವುದಕ್ಕೆ ಹೊರಟಿದ್ದಾರೆ. ಅವರಿಗೆ ಅನುಕೂಲ ವಾಗಲಿ ಎಂದು ಪ್ರಸ್ತಾಪ ಮಾಡುತ್ತಿರುವುದು. ಈ 64 enquiry ಏನಾಗಿದೆ, ಈ ಸಂಘಗಳ ಮೇಲೆ ನೀವು ಎಷ್ಟು ದಿನದಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ? ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ? ಅರ್ಬನ್ ಗೃಹ ನಿರ್ಮಾಣ ಸಂಘದ ಬಗ್ಗೆ ಹಿಂದಿನ ಸದನದಲ್ಲಿ ಹಲವಾರು ಬಾರಿ ಪ್ರಸ್ತಾಪವಾಗಿತ್ತು. ಆದರೆ ಇದರ ಬಗ್ಗೆ ಗಂಭೀರವಾಗಿ ಏನಾದರೂ ತನಿಖೆ ಮಾಡಿದ್ದಾರ? ಈ ಸದನದಲ್ಲಿ ಹಲವಾರು ಬಾರಿ ಪ್ರಸ್ತಾಪವಾದರೂ ಇವತ್ತಿನವರೆಗೂ ತನಿಖೆಯಾಗಿಲ್ಲ.

ಆದ್ದರಿಂದ ನಿಮಗೆ ಸಹಕಾರಿಯಾಗಲಿ ಎನ್ನುವ ದೃಷ್ಟಿಯಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಜಿಲ್ಲಾ ವ್ಯಾಪ್ತಿಯಲ್ಲಿರುವಂತಹ ಗೃಹ ನಿರ್ಮಾಣ ಸಂಘ, ಅದನ್ನು ನಿಯಂತ್ರಿಸುವುದಕ್ಕೆ ಏನು ಇಟ್ಟಿದ್ದೀರಿ? ಆ ಸಂಘದಲ್ಲಿ ನಿವೇಶನ ಗಳನ್ನು ಸರಿಯಾದ ರೀತಿಯಲ್ಲಿ ಮೆಂಬರುಗಳಿಗೆ ಯಾರು ಕೊಡುತ್ತಿಲ್ಲ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದೀರಾ? ಬೆಂಗಳೂರು ಮತ್ತು ಮೈಸೂರು ಜಿಲ್ಲೆಯಲ್ಲಿರುವಂತಹ ಕೆಲವು ಕಪ್ಪು ಪಟ್ಟಿಯಲ್ಲಿರುವ ಸಂಘಗಳು ನಿವೇಶನಗಳನ್ನು ಠೇವಣಿಯನ್ನು ತೊಡಗಿಸಿರುವ ಸಂಖ್ಯೆ ಎಷ್ಟು ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ನಿಮ್ಮ ಸಂಘಗಳನ್ನು ಈಗ ನೀವೇ ಕಪ್ಪು ಪಟ್ಟಿಯಲ್ಲಿ ಸೇರಿಸಿದ್ದೀರಿ. ಅದರಲ್ಲಿ ತೊಡಗಿಸಿರುವ ಸದಸ್ಯರ ಸಂಖ್ಯೆ ಎಷ್ಟು? ಸಂಘಗಳಲ್ಲಿ ಯಾರ್‍ಯಾರು ಸದಸ್ಯರಿರುತ್ತಾರೆ, ಅವರು eligible ಇರುವುದಿಲ್ಲ. ಇವರಿಗೆ ನಿವೇಶನಗಳು ಲಭ್ಯವಾಗಿದ್ದರೆ ಇದಕ್ಕೆ ಯಾರು ಹೊಣೆಗಾರರು? ಒಂದು ಪಕ್ಷ ಕಪ್ಪು ಪಟ್ಟಿಯಲ್ಲಿ ಸೇರಿಸಿ ಮತ್ತೆ ಅವರಿಗೆ ನಿವೇಶನಗಳನ್ನು ಕೊಟ್ಟಿದ್ದರೆ ಇದಕ್ಕೆ ಯಾರು ಜವಾಬ್ದಾರರು ಎನ್ನುವುದನ್ನು ತಾವು ಗಮನಕ್ಕೆ ತರಬೇಕಾಗುತ್ತದೆ. ಇವತ್ತು ಒಂದು ಗೃಹ ನಿರ್ಮಾಣ ಸಂಘದಲ್ಲಿ ಒಬ್ಬರು ಸದಸ್ಯರು ಇರುತ್ತಾರೆ. ಈಗ ರಾಜ್ಯದಲ್ಲಿ 1,100 ಸಂಘಗಳು ಇವೆ. ಅವುಗಳಲ್ಲಿ ನೀವು ಮೂರು ಲಕ್ಷ ನಿವೇಶನಗಳನ್ನು ಮಾಡಿದ್ದೀರಿ ಎನ್ನುವ ಮಾಹಿತಿ ಇದೆ. ಈ ಮೂರು ಲಕ್ಷ ನಿವೇಶನಗಳನ್ನು ಹಂಚಿಕೆ ಮಾಡುವಾಗ ಏನಾದರೂ ನಿಯಮಾವಳಿಗಳ ಉಲ್ಲಂಘನೆಯಾಗಿದೆಯೇ? ಉಲ್ಲಂಘನೆಯಾಗಿದ್ದರೆ ಯಾರ ಮೇಲಾದರೂ ಕ್ರಮ ತೆಗೆದುಕೊಳ್ಳಿ, ನಾವು ಬೇಡವೆನ್ನುವುದಿಲ್ಲ. ಏಕೆಂದರೆ ನಾನು ಒಂದು ವಿಚಾರ ಹೇಳುತ್ತೇನೆ. ಕೆಲವೊಂದು ವಿಚಾರದಲ್ಲಿ ನಿಮಗೆ ಚೆಕ್ ಮಾಡುವುದಕ್ಕೆ ಅನುಕೂಲವಾಗಲಿ ಎಂದು ತಮ್ಮ ಗಮನಕ್ಕೆ ತರುತ್ತೇನೆ. ನಾನು ವಿಧಾನಸಭಾ ಸದಸ್ಯರ quota ದಲ್ಲಿ ತೆಗೆದುಕೊಂಡಿಲ್ಲ. ನಾನು ಮೂರು ಬಾರಿ ಸದಸ್ಯ ನಾದರೂ ಕೂಡ ಇವತ್ತಿನವರೆಗೂ ತೆಗೆದುಕೊಂಡಿಲ್ಲ. ಇವತ್ತು ಮೂರು ಲಕ್ಷ ನಿವೇಶನಗಳನ್ನು ಹಂಚಿದ್ದೀರಲ್ಲ, 1,100 ಸಂಘ eligible ಇದೆ. 10 ಸಂಘ 64 enquiry ಆಗಿದೆ. ಆ ಮೂರು ಲಕ್ಷ ನಿವೇಶನಗಳನ್ನು ನಿಮ್ಮ ನಿಯಮಾವಳಿ ಪ್ರಕಾರ ಹಂಚಿದ್ದೀರಾ? ಹಂಚಿಲ್ಲದಿದ್ದರೆ, ಯಾವ್ಯಾವ ಸಂಘ ದವರು ಹಂಚಿಲ್ಲ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಇಲ್ಲಿಯ ವರೆಗೆ ಯಾವ್ಯಾವ ಅಧಿಕಾರಿಗಳು ಕ್ರಮ ತೆಗೆದುಕೊಂಡಿಲ್ಲ, ನೀವು ಆ

ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಮೂರು ಲಕ್ಷ ನಿವೇಶನಗಳನ್ನು ಕಾನೂನುಬಾಹಿರವಾಗಿ ಹಂಚುವಾಗ, ಕಾನೂನು ರೀತಿಯಲ್ಲಿ ಹಂಚಿಲ್ಲದೆ ಹೋದರೆ ಅಧಿಕಾರಿಗಳ ಮೇಲೆ ಕ್ರಮ ತೆಗೆದು ಕೊಳ್ಳುತ್ತೀರೋ, ಸಂಘಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರೋ ಎಂದು ತಿಳಿಸಬೇಕಾಗುತ್ತದೆ. ತಾವು ಪತ್ರಿಕೆಯಲ್ಲಿ ಬಹಿರಂಗವಾಗಿ ಹೇಳಿರುವುದರಿಂದ, ಇದನ್ನು ನಾನು ತಮ್ಮ ಗಮನಕ್ಕೆ ಬರಲಿ ಎಂದು ಕೊಡುತ್ತಿದ್ದೇನೆ. ತಾವು ಬಹಿರಂಗವಾಗಿ ಹೇಳದೇ ಹೋಗಿದ್ದರೆ, ಇದನ್ನು ನಾನು ಕೇಳುವುದಕ್ಕೆ ಹೋಗುತ್ತಿರಲಿಲ್ಲ. ತಾವು ನಮ್ಮ ರಾಜ್ಯದ ಜನತೆಗೆ ಒಂದು ಸಂದೇಶವನ್ನು ಕೊಟ್ಟಿದ್ದೀರಿ. ಆ ಸಂದೇಶವನ್ನು ಕೊಟ್ಟಿದ್ದರಿಂದ ನಾನು ಒಬ್ಬ ಚುನಾಯಿತ ಪ್ರತಿನಿಧಿಯಾಗಿ ನಡೆಯುವಂಥದ್ದನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಆ ಉದ್ದೇಶದಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ, ತಾವು ಸುಮ್ಮನೆ raise ಆಗುವುದಕ್ಕೆ ಹೋಗಬೇಡಿ. ತಮ್ಮ ಬಗ್ಗೆ ನನಗೆ ಗೌರವವಿದೆ. ನಾನು ನಿಧಾನವಾಗಿ ಹೇಳುವುದಕ್ಕೆ ಬಿಡುವುದಿಲ್ಲ, ತಾವು ಸ್ವಲ್ಪ ತಾಳ್ಮೆಯಿಂದ ಕುಳಿತುಕೊಳ್ಳಿ.

ಶ್ರೀ ಬಿ.ಜೆ. ಪುಟ್ಟಸ್ವಾಮಿ : ನಾನು ನಿಧಾನವಾಗಿ ಹೇಳುತ್ತೇನೆ. ಕೇಳುವುದಕ್ಕೆ ತಯಾರು ಇದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಈ 3 ಲಕ್ಷ ಸೈಟ್ ಗಳನ್ನು ಯಾವ ರೀತಿ ಮಾಡುತ್ತೀರೋ ಮಾಡಿ, ನಂತರ ಸಂಘಗಳ ಕಲಂ 64 ಬಗ್ಗೆ ಏನು ಮಾಡುತ್ತೀರಾ ಎಂಬುದನ್ನು ನೋಡೋಣ. ಇದರ ಮೇಲೆ ಬೆಳಕು ಚೆಲ್ಲುವುದಕ್ಕೆ ಮುಂದಿನ ಸದನ ಸಭೆ ಇದೆ. ರಾಜ್ಯದಲ್ಲಿ ಎಷ್ಟು Federations ಇದೆ? ಯಾವ್ಯಾವ Federations ಏನೇನು ಆಗಿದೆ? ಇವತ್ತು ಅವು ಯಾವುದೇ State Level Federation ಇರಬಹುದು, ಇವತ್ತು ಈ State Level Federation ಗಳಲ್ಲಿ ಆದಾಯ ಬರುವಂಥದ್ದು ಯಾವ್ಯಾವುದಿದೆ? State Federation ಗಳು ಆದಾಯ ಇಲ್ಲದೇ loss ಆಗುವುದಕ್ಕೆ ಕಾರಣಕರ್ತರು ಯಾರು? ಇವುಗಳನ್ನು ತಿಳಿಸಬೇಕಾಗುತ್ತದೆ. ಇವತ್ತು ಕೆಲವು State Federation ಗಳು ಉತ್ತಮವಾಗಿ ಕೆಲಸ ಮಾಡದೇ ಇರಬಹುದು. ಮಾನ್ಯ ಯಡಿಯೂರಪ್ಪನವರು ಮಧ್ಯೆ ಪ್ರವೇಶ ಮಾಡುವುದಾದರೆ, ನಮಗೆ ಇಂಥಾದ್ದಕ್ಕೆ ತಮ್ಮ ಬೆಂಬಲ ಬೇಕು. ಕಳೆದ ಒಂದು ವಾರದಿಂದ ಬೆಂಬಲ ಸೂಚಿಸುತ್ತಿದ್ದೀರಿ. ನಾವು ಹೇಳುವಂಥದ್ದನ್ನು ನೀವೇ

ಮಾಡಿಸುತ್ತಿದ್ದೀರಿ. ದಯಮಾಡಿ ತಾವು ನಮಗೆ ಸಹಕಾರ ನೀಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರಿಗೆ ಅಂಕಿ-ಅಂಶಗಳು ದಾಖಲೆ ಸಮೇತ ಅನೇಕ ಮಾಹಿತಿಗಳು ಇವೆ. ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾವುದೇ ಸಂಸ್ಥೆಗಳು ಇರಲಿ, ಯಾವುದೇ Federation ಇರಲಿ, ಇಂತಿಂಥದ್ದರಲ್ಲಿ ಆಗಿದೆಯೆಂದು 1,2,3,4,5 ಎಂದು ಹೇಳಿದರೆ, ಇದರ ಮೇಲೆ ಕ್ರಮ ತೆಗೆದುಕೊಂಡು ನಿಮ್ಮ ಮನೆಗೆ ಉತ್ತರವನ್ನು ಕಳುಹಿಸಿ ಕೊಡುತ್ತೇವೆ. ತಮಗೆ ಆ ಭರವಸೆಯನ್ನು ನಾನು ಕೊಡುತ್ತೇನೆ. ಅದು ಯಾವುದೇ Federation ಇರಬಹುದು, ಯಾವುದೇ Society ಇರಬಹುದು, ಕ್ರಮ ತೆಗೆದುಕೊಳ್ಳದಿದ್ದರೆ ಆಗ ತಾವು ಹೇಳಬಹುದು. ತಾವು ನಮಗೆ ಮಾಹಿತಿ ಕೊಡಿ ಸಾಕು, ಏಕೆಂದರೆ ತಮ್ಮಲ್ಲಿರುವಷ್ಟು ಮಾಹಿತಿ ನಮ್ಮಲ್ಲಿ ಯಾರಲ್ಲೂ ಇಲ್ಲ. ಅದಕ್ಕೋಸ್ಕರ ಆ ತುದಿ, ಈ ತುದಿ ಎಂದು ಹೇಳದೆ, ಸಂಪೂರ್ಣವಾಗಿ ಹೀಗಿದೆಯೆಂದು ಹೇಳಿ, ತಮ್ಮ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ. ಕ್ರಮ ತೆಗೆದುಕೊಳ್ಳದಿದ್ದರೆ ಆಗ ತಾವು ನಾನು ಮಾಹಿತಿ ಕೊಟ್ಟೆ, ಕ್ರಮ ತೆಗೆದುಕೊಳ್ಳಲಿಲ್ಲವೆಂದು ಹೇಳಿ.

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಜಿ ಮುಖ್ಯಮಂತ್ರಿಯವರು ಹೇಳಿದ ಹಾಗೆ ಬೆಳಗಾಂ ಅಧಿವೇಶನದಲ್ಲಿ ಅವರೇ ನನಗೆ ಭರವಸೆಯನ್ನು ಕೊಟ್ಟರು. ಆಗ ಸಹಕಾರ ಸಚಿವರು ಮಾನ್ಯ ಲಕ್ಷ್ಮಣ ಸವದಿಯವರು ಅಗಿದ್ದರು. ನಾನು ಧರಣಿ ಕುಳಿತುಕೊಳ್ಳುವುದಕ್ಕೆ ಹೋದಾಗ ಮಾನ್ಯ ರೇವಣ್ಣನವರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿದರು. ಅವತ್ತಿನ ದಿವಸ- Karnataka Urban Housing Society ಯಲ್ಲಿ ಜ್ಯೇಷ್ಠತೆ ಆಧಾರದ ಮೇಲೆ ಸದಸ್ಯರಿಗೆ ಕೊಡಲಿಲ್ಲ. ಇಡೀ ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳುವಂಥ ಜಮೀನು ಇವತ್ತು ಸದಸ್ಯರಲ್ಲದೇ ಇರುವವರಿಗೆ ಕೊಡುತ್ತಿದ್ದಾರೆಂದು ಆದಾಗ ಈ ಸದನದಲ್ಲಿ CoD ತನಿಖೆಗೆ ಆದೇಶವನ್ನು ಮಾಡಲಾಗಿತ್ತು. ಇದು ಎರಡು ವರ್ಷಗಳಾಯಿತು, ಇನ್ನು CoD ಯಿಂದ ತನಿಖೆ ವರದಿಯೂ ಬರಲಿಲ್ಲ, ಇವತ್ತು ನಿರಂತರವಾಗಿ ಕಟ್ಟುತ್ತಿದ್ದಾರೆ. ಮಾನ್ಯ ಲಕ್ಷ್ಮಣ ಸವದಿಯವರೆ ಬಂದು

ಸ್ಥಳದಲ್ಲಿ ಏನು ನಡೆಯುತ್ತಿದೆಯೆಂಬುದನ್ನು ನೋಡಿದ್ದರು. ನಾನು ನಿಜವಾಗಲೂ ಹೇಳುವುದೇನೆಂದರೆ, ಇಂಥ fraudulent ಸಂಘಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ನಮ್ಮ Co-operative Department, ಪೊಲೀಸ್ ಇಲಾಖೆ ಮತ್ತು ಸ್ಥಳೀಯ ಸಂಸ್ಥೆಗಳ ಸಹಕಾರವಾಗದೇ ಇರುವುದರಿಂದ, ನಿಜವಾದ ಸದಸ್ಯರು ಎಷ್ಟೋ ಜನರು ಸತ್ತು ಹೋದರು. Karnataka Urban Housing Society ಯಲ್ಲಿ ನೈಜ ಸದಸ್ಯರಿಗೆ ದೊರೆಯದೇ ಇರುವಂಥದ್ದು. ಮಾನ್ಯ ಯಡಿಯೂರಪ್ಪನವರು ನಮ್ಮ ಸರ್ಕಾರ ನ್ಯಾಯ ಒದಗಿಸುತ್ತದೆಂಬ ಮಾತನ್ನು ಹೇಳಿದರು. ಇವತ್ತು ಮಾಜಿ ಮುಖ್ಯ ಮಂತ್ರಿಗ ಳಾಗಿದ್ದರೂ, ತಮ್ಮ ಕಳಕಳಿಯನ್ನು ಮೆಚ್ಚುತ್ತೇನೆ. ದಯಮಾಡಿ ನೈಜ ಸದಸ್ಯರಿಗೆ ಕೊಡತಕ್ಕಂಥ ತನಿಖೆ ವರದಿ ಏನಾಯಿತೆಂಬುದನ್ನು ಹೇಳ ಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾಜಿ ಮುಖ್ಯಮಂತ್ರಿ ಯವರು ಎಷ್ಟೊಂದು ಸಹಕಾರ ಮಾಡುತ್ತಿದ್ದಾರೆ.

ಅಧ್ಯಕ್ಷರು : ತಾವು ಚರ್ಚೆಯನ್ನು ಮುಕ್ತಾಯ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ತಾವು ನಮಗೆ ಸಹಕಾರ ಮಾಡಿ, ನಾವು ಬೆಳಕು ಚೆಲ್ಲುತ್ತಿದ್ದೇವೆ. ಇದರಿಂದ ಸಹಕಾರ ಮಂತ್ರಿಯವರಿಗೆ ಅನುಕೂಲ ವಾಗಲಿ, ರಾಜ್ಯದ ಬಡವರು ಗೃಹ ಮಂಡಳಿಗೆ ನಿವೇಶನಕ್ಕಾಗಿ ಅರ್ಜಿಯನ್ನು ಹಾಕಿಕೊಂಡಿರುವವರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಮಾಡುತ್ತಿದ್ದೇನೆ. ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದೇ ನೆಂದರೆ, ಕರ್ನಾಟಕ ರಾಜ್ಯದಲ್ಲಿ state level ವಸತಿ ಒಂದು, ತಾವು Federation ಎಂದು ಮಾಡಿದ್ದೀರಿ. ಈ Federation ಬಗ್ಗೆ ಒಂದು ಉದಾಹ ರಣೆಯನ್ನು ಕೊಡುತ್ತೇನೆ. ನಮಗೆ ವಸತಿ ಬಗ್ಗೆ interest ಇರುವುದರಿಂದ ತಮಗೆ ಮಾಹಿತಿಯನ್ನು ಕೊಡುತ್ತಿದ್ದೇನೆ. ನಾನು ವಸತಿ ಇಲಾಖೆಯ ಬಗ್ಗೆ special interest ತೆಗೆದುಕೊಂಡಿರುವುದರಿಂದ ತಮಗೆ ಇನ್ನೊಂದು ಮಾಹಿತಿ ಯನ್ನು ಕೊಡುತ್ತೇನೆ. ಕರ್ನಾಟಕ ರಾಜ್ಯದ ವಸತಿ ಮಹಾ ಮಂಡಳಿ, ಬೆಂಗಳೂರಿನಲ್ಲಿ ಗುರುತರವಾದ ಅವ್ಯವಹಾರಗಳ ಕುರಿತು ವಿಚಾರಣೆ ನಡೆಸುವ ಬಗ್ಗೆ, ದಿನಾಂಕ:11.04.2007ರಲ್ಲಿ ಮಾನ್ಯ ಮುಖ್ಯ ಮಂತ್ರಿಯವರಿಗೆ ಅರ್ಜಿಯನ್ನು ಕೊಡುತ್ತಾರೆ. ಇಲ್ಲಿ ನಡೆದಿರುವಂಥ ಅವ್ಯವಹಾರಗಳ ಬಗ್ಗೆ, ಸಹಕಾರಿ ಇಲಾಖೆಯ ಕಾರ್ಯದರ್ಶಿಯವರಿಗೆ ಆಗ ಒಂದು ಪತ್ರವನ್ನು

ಬರೆಯುತ್ತಾರೆ, ಯಾರು ಅರ್ಜಿಯನ್ನು ಕೊಡುತ್ತಾರೆ, ಆ ಅರ್ಜಿಯ ಆಧಾರದ ಮೇಲೆ ಸಹಕಾರ ಇಲಾಖೆಯ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆಯುತ್ತಾರೆ. ಇದರ ಮೇಲೆ ಕಲಂ 64 ರಲ್ಲಿ ವಿಚಾರಣೆ ಮಾಡಿ ಎಂದು ಹೇಳುತ್ತಾರೆ. ಕಲಂ 64ರ ಅಡಿಯಲ್ಲಿ ಏನೇನು ವಿಚಾರಣೆ ನಡೆದಿದೆ? ವಸತಿ ಮಹಾ ಮಂಡಳಿ, ದೊಡ್ಡ ಆಲದ ಮರದ ಹತ್ತಿರ ಚುಂಚನ ಕುಪ್ಪೆ ಮತ್ತು ಸುತ್ತಮುತ್ತಲ ಗ್ರಾಮಗಳ ಸರ್ವೆ ನಂಬರ್‌ಗಳಲ್ಲಿ ಜಮೀನು ಅನ್ನು ವಸತಿ ಬಡಾವಣೆ ನಿರ್ಮಿಸಲು ಸುಮಾರು 2,000 ಸದಸ್ಯರಿಂದ 100 ಕೋಟಿ ರೂ.ಗಳನ್ನು ನಿವೇಶನಕ್ಕಾಗಿ ಸಂಗ್ರಹಿಸಲಾಗಿದೆ. ಈ ಹಣವನ್ನು ಸಂಗ್ರಹಣೆ ಮಾಡಿ 40 ಎಕರೆ ಜಮೀನನ್ನು ಮಾತ್ರ ಖರೀದಿ ಮಾಡಿ, ಇದಕ್ಕೆ 10–12 ಕೋಟಿ ರೂ.ಗಳನ್ನು developer ಗಳು ಖರ್ಚು ಮಾಡುವುದೆಂದು ಹೇಳಿ, 2,000 ಅರ್ಜಿದಾರರಿಗೆ ನಿವೇಶನವನ್ನು ಕೊಡುವುದಿಲ್ಲ, document ಗಳೆಲ್ಲಾ forgery ಆಗಿದೆ. ದಿನಾಂಕ: 11.04.2000 ರಲ್ಲಿ, ಸಿ.ಎಂ. ರವರು 2114/SIP:13.04.2007 ರಲ್ಲಿ ಕಲಂ 64 ರಲ್ಲಿ enquiry ಮಾಡಿಯೆಂದು ಆದೇಶ ಮಾಡಿರುವಂಥದ್ದನ್ನು ತಮಗೆ ಕಳುಹಿಸಿ ಕೊಡುತ್ತೇನೆ. ಇದು ಏನಾಗಿದೆ? ಈ ವಿಚಾರಣೆಯ ವರದಿಯನ್ನು ಸಭೆಯ ಮುಂದೆ ನೀಡುತ್ತೀರಾ? State Level Federation ನಲ್ಲಿ 2,000 ಜನ ನಿವೇಶನ ದಾರರ 100 ಕೋಟಿ ರೂ.ಗಳನ್ನು ಸಂಗ್ರಹಣೆ ಮಾಡಿ, ಈ ಹಣದಲ್ಲಿ ಜಮೀನನ್ನು ಖರೀದಿ ಮಾಡಿಲ್ಲ, ನಿವೇಶನವನ್ನು ಹಂಚಿಲ್ಲ. ಯಾರೋ ನಾಲ್ಕಾರು ಜನರ ಬಗ್ಗೆ ಇದರಲ್ಲಿ ನಡೆದಿರುವಂಥ ಅವ್ಯವಹಾರಗಳ ಬಗ್ಗೆ ಕೇಸ್ ನಂಬರ್, ಎಲ್ಲಾ ಸಂಪೂರ್ಣವಾದ ವಿವರಗಳನ್ನು ತಮಗೆ ಕಳುಹಿಸಿ ಕೊಡುತ್ತೇನೆ. ಇವೆಲ್ಲಾ ತಮಗೆ ಅನುಕೂಲವಾಗಲಿ, ತಾವು 6–7 ತಿಂಗಳಲ್ಲಿ ಒಳ್ಳೆಯ ಕೆಲಸವನ್ನು ಮಾಡುತ್ತೀರಿ, ಏಕೆಂದರೆ ಕಡತಗಳನ್ನು ಹುಡುಕುವು ದರಲ್ಲಿ ನಂಬರ್ ಒನ್ ಆಗಿದ್ದೀರಿ, ಹಾಗಾಗಿ ಇದು ನಿಮಗೆ ಅನುಕೂಲ ವಾಗಲಿ ಎಂದು ಕಳುಹಿಸಿ ಕೊಡುತ್ತಿದ್ದೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣ ನವರು ನಿಯಮ 69ರ ಅಡಿಯಲ್ಲಿ ಸಂಘ–ಸಂಸ್ಥೆಗಳಲ್ಲಿ ನಡೆದಿರುವಂಥ ಲೋಪದೋಷಗಳ ಬಗ್ಗೆ ಸರ್ಕಾರ ಯಾವ ರೀತಿಯಾಗಿ ಕ್ರಮಗಳನ್ನು ತೆಗೆದು ಕೊಳ್ಳಬೇಕೆಂಬ ಬಗ್ಗೆ ಬಹಳ ಚೆನ್ನಾಗಿ ಬೆಳಕನ್ನು ಚೆಲ್ಲುತ್ತಿದ್ದಾರೆ. ನಾನು ತಮ್ಮ ಮುಖಾಂತರ ಸನ್ಮಾನ್ಯ ರೇವಣ್ಣನವರಿಗೆ ಒಂದು ಮಾತನ್ನು ಹೇಳಬಯ

ಸುತ್ತೇನೆ. ಈಗಾಗಲೇ ಕೇಂದ್ರ ಸರ್ಕಾರ ಸಂವಿಧಾನ 111ನೇ ಕಲಂ ಅನ್ನು ತಿದ್ದುಪಡಿ ಮಾಡಿದೆ. ಬಹುಶಃ ಇದನ್ನು ಜನವರಿ ತಿಂಗಳೊಳಗೆ ರಾಜ್ಯ ಸರ್ಕಾರ ಅನುಷ್ಠಾನಕ್ಕೆ ತರಲೇ ಬೇಕಾಗುತ್ತದೆ. ನಾವು ಇದನ್ನು ಅನುಷ್ಠಾನಕ್ಕೆ ತಂದ ಮೇಲೆ, ಇವತ್ತು ತಾವು ವಿಷಯದ ಬಗ್ಗೆ ಬೆಳಕನ್ನು ಚೆಲ್ಲುತ್ತಿದ್ದೀರಿ. ಇಡೀ ರಾಜ್ಯದಲ್ಲಿರುವಂಥ ಸಹಕಾರಿ ಸಂಘಗಳಲ್ಲಿ ಸರ್ಕಾರದ ಷೇರುಗಳು ಮತ್ತು ಬಂಡವಾಳ ಇಲ್ಲದೇ ಹೋದಾಗ, ಅಂಥ ಸಂಘ ಸಂಸ್ಥೆಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವಂಥದ್ದಾಗಲಿ, enquiry ಮಾಡುವಂಥದ್ದು ಅಗಲಿ, ಆ ಬೋರ್ಡ್‌ಗಳ ಮೇಲೆ ಕ್ರಮ ತೆಗೆದುಕೊಳ್ಳುವಂಥದ್ದಕ್ಕೆ ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಅದಕ್ಕೆ ಇವತ್ತು ಮಾನ್ಯ ರೇವಣ್ಣನವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಸನ್ಮಾನ್ಯ ಸಹಕಾರ ಸಚಿವರು, ಕೇಂದ್ರ ಸರ್ಕಾರದ ಕಾನೂನು ತಿದ್ದುಪಡಿಯಾಗಿರುವಂಥದ್ದನ್ನು ಬರುವ ಜನವರಿಯೊಳಗೆ compulsory ಮಾಡಬೇಕಾಗುತ್ತದೆ. ನಾನು ಕೂಡ ಪತ್ರಿಕೆಯನ್ನು ನೋಡಿದ್ದೇನೆ, ಅಷ್ಟರೊಳಗೆ ತಮ್ಮ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಿ, ಈ ರಾಜ್ಯದಲ್ಲಿರುವಂಥ ಅನೇಕ ಸಂಘ-ಸಂಸ್ಥೆಗಳ ಲೋಪ ದೋಷಗಳು ಏನು ಇವೆ, ಅದನ್ನು ತಿದ್ದುಪಡಿ ಮಾಡುವುದರ ಜೊತೆಗೆ, ಅವರನ್ನು ಸರಿ ದಾರಿಗೆ ತರುವಲ್ಲಿ ತಾವು ಹೆಚ್ಚಿನ ಆಸಕ್ತಿಯನ್ನು ವಹಿಸ ಬೇಕೆಂದು ಹೇಳಿ, ತಮ್ಮ ಮೂಲಕ ಸರ್ಕಾರಕ್ಕೆ ಮತ್ತು ಮಾನ್ಯ ರೇವಣ್ಣ ನವರಿಗೂ ಮನವರಿಕೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇನ್ನು ಒಂದು ವಿಷಯವನ್ನು ತಿಳಿಸಬೇಕಾಗಿತ್ತು. ಮಾಜಿ ಸಚಿವರಾಗಿರುವ ಮಾನ್ಯ ಲಕ್ಷ್ಮಣ ಸಂಗಪ್ಪ ವಸದಿಯವರು ಇದ್ದಾಗ ಮಾಡಿದ್ದಾರೆ. ತಮ್ಮ ಗಮನಕ್ಕೆ ತರುವುದೇ ನೆಂದರೆ, ಮಾನ್ಯ ಲಕ್ಷ್ಮಣ ಸವದಿಯವರು failure ಆಗಿದ್ದಾರೆಂದು ಪತ್ರಿಕಾ ಹೇಳಿಕೆಯಲ್ಲಿ ಬಂದಿದೆ. ನಮ್ಮ ಹಿಂದಿನ ಸಹಕಾರ ಇಲಾಖೆಯ ಸಚಿವರು ಮಾಡುವ ಕೆಲಸದಲ್ಲಿ ಯಾವ ಕೆಲಸವನ್ನು ಮಾಡುವುದಕ್ಕೆ ಆಗಿಲ್ಲವೆನ್ನುವ ವಿಷಯವನ್ನು ಪತ್ರಿಕೆಯನ್ನು ಓದಿದಾಗ ನಮಗೆ ಗೊತ್ತಾಗುತ್ತದೆ.

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಮಾನ್ಯ ಅಧ್ಯಕ್ಷರೆ, ತಾವು ಅರ್ಥವನ್ನು ಏನೇನು ಬೇಕೋ ಅದೆಲ್ಲವನ್ನು ಕಲ್ಪಿಸಿಕೊಳ್ಳುವುದು.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ತಾವು ಮುಕ್ತಾಯ ಮಾಡಿ.

(ಗೊಂದಲ)

ಅಧ್ಯಕ್ಷರು : ನೀವು ಮುಕ್ತಾಯ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ರೈತರಿಗೆ ಕೊಟ್ಟಿರುವುದು 6 ಕೋಟಿ ರೂಪಾಯಿ ಸಾಲ. ಅಂಥ ಒಳ್ಳೊಳ್ಳೆಯ ವಿಷಯಗಳ ಮೇಲೆ ನಿಮಗೆ ಬೆಳಕು ಚೆಲ್ಲುತ್ತಿದ್ದೇನೆ. ಏಕೆಂದರೆ, ಹಿಂದಿನ ಸಹಕಾರಿ ಸಚಿವರಿಗೆ ಹಲವಾರು ಬಿಡುವಿಲ್ಲದ ಕಾರ್ಯಕ್ರಮಗಳಿದ್ದುದರಿಂದ ಮಾಡಿಲ್ಲ ಅಥವಾ ಅವರಿಗೆ ಅಧಿಕಾರಿಗಳು ಅವರಿಗೆ ಸರಿಯಾದ ಮಾಹಿತಿ ಕೊಟ್ಟಿಲ್ಲ. ಆದರೆ ಈಗಿನ ಸಚಿವರಿಗೆ ಎರಡು ದಿವಸದಲ್ಲಿ ಮಾಹಿತಿ ಕೊಟ್ಟಿದ್ದಾರೆ. ಆದ್ದರಿಂದ ನಿಮ್ಮ ಗಮನಕ್ಕೆ ತರುತ್ತಿದ್ದೇನೆ. 97th Amendment ಆಗಿದೆ ಎಂದು ಹೇಳುತ್ತೀರಿ. ಅದರಲ್ಲಿ ಮಾಡಬೇಕು ಎನ್ನುವ ಭಾವನೆ ಹಿಂದಿನ ಸಹಕಾರಿ ಸಚಿವರಿಗಿರಲಿಲ್ಲ. ಬಲಿ ಹಾಕಬೇಕು ಎನ್ನುವುದು ಅವರಿಗಿದೆ.

ಅಧ್ಯಕ್ಷರು : ದಯವಿಟ್ಟು, ಬೇಗ ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ : ಅವರಿಗೆ ಅನುಕೂಲವಾಗಲಿ ಎಂದು ಕೆಲವು ವಿಷಯಗಳನ್ನು ಹೇಳುತ್ತಿದ್ದೇನೆ. ನೀವೇನಾದರೂ ವಿಧಾನ ಮಂಡಲದ ಹೌಸಿಂಗ್ ಸೊಸೈಟಿಗೆ ಅರ್ಜಿ ಹಾಕಿರುವಿರಾ, ಅಧ್ಯಕ್ಷರೆ? 64ರಂತೆ ಎನ್‌ಕ್ವೈರಿ ನಡೆಯುತ್ತಿದೆ. ಅಧ್ಯಕ್ಷರೆ, ನಿಮಗೆ ಗಾಬರಿಯಾಗುವಂಥಾದ್ದು ಏನಾದರೂ ಇದ್ದರೆ ಹೇಳಿ. ನಾನು ಬೇಕಾದರೆ ವಾಪಸ್ಸು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ನನಗೇಕೆ ಗಾಬರಿ?

ಶ್ರೀ ಹೆಚ್.ಡಿ. ರೇವಣ್ಣ : ಇಲ್ಲದಿದ್ದರೆ ಸಾಹೇಬರು ಇಷ್ಟೊಂದು ಆತುರವನ್ನೇಕೆ ಮಾಡುತ್ತಿದ್ದೀರಿ?

ಅಧ್ಯಕ್ಷರು : ಕೊನೆಗೆ ನಮಗೆ ನಾನೇ ಸಿಕ್ಕಿದ್ದಾ?

ಶ್ರೀ ಹೆಚ್.ಡಿ. ರೇವಣ್ಣ : ಹಾಗಿದ್ದರೆ ಒಂದೆರಡು ನಿಮಿಷ ಫ್ರೀ ಬಿಡಿ ಸ್ವಾಮಿ. ನಮ್ಮ ಮಂತ್ರಿಗಳಿಗೆ ಕೆಲವು ಒಳ್ಳೊಳ್ಳೆಯ ಮಾಹಿತಿಯನ್ನು ಕೊಡುತ್ತಿದ್ದೇನೆ. ಅವರು ಫ್ರೀ ಆಗಿ ಕೆಲಸ ಮಾಡಲಿ ಎಂದಷ್ಟೇ, ನಮಗೆ ಬೇರೇನೂ ಇಲ್ಲ. ತಮ್ಮ ಗಮನಕ್ಕೆ ತರುತ್ತೇನೆ, ಅಪೆಕ್ಸ್ ಬ್ಯಾಂಕ್ ರೈತರಿಗೆ ಸಾಲ ಕೊಡುತ್ತದೆ. ಸಾಲವು ಅಪೆಕ್ಸ್ ಬ್ಯಾಂಕಿನಿಂದ ಜಿಲ್ಲಾ ಬ್ಯಾಂಕುಗಳಿಗೆ ಹೋಗುತ್ತದೆ. ಈ ಸಾರಿ 21 ಜಿಲ್ಲಾ ಬ್ಯಾಂಕುಗಳಿಂದ 5,700 ಕೋಟಿ ಸಾಲ ಕೊಟ್ಟಿದೆ. ಅದಕ್ಕೆ ನಾನು ಸಂತೋಷ ವ್ಯಕ್ತಪಡಿಸುತ್ತೇನೆ. ಏಕೆಂದರೆ, ಹಿಂದೆ ಸವದಿಯವರು 2011 ರಿಂದ ಸರ್ಕಾರಿ ಇಲಾಖೆಯ ಸಚಿವರಾಗಿದ್ದು, ಅವರೂ ಸಹ ಸಹಕಾರಿ ರಂಗದಲ್ಲಿ ಇರುವುದರಿಂದ 19 ಸಾವಿರ ಜನ ರೈತರಿಗೆ ಸಾಲ

ಹೋಗುವಂತಾಗಿದೆ. ನಿಮಗೆ ಒಂದು ಉದಾಹರಣೆ ಕೊಡುತ್ತೇನೆ. ಅಪೆಕ್ಸ್ ಬ್ಯಾಂಕಿನಿಂದ ರೈತರಿಗೆ ಸಾಲ ಕೊಡುವುದು. ರೈತರಿಗೆ ಸಾಲ ಕೊಡುವಂಥ ಈ ಸಂಸ್ಥೆಯಿಂದ ಬೆಂಗಳೂರು ನಗರದಲ್ಲಿ ರಿಯಲ್ ಎಸ್ಟೇಟ್ ಮಾಡುವುದಕ್ಕೂ ಸಾಲ ಕೊಡುವಿರಾ?

ಅಧ್ಯಕ್ಷರು : ದಯವಿಟ್ಟು ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ : ರೇವಣ್ಣ ಈಗ ನೀನು ಯಾವುದನ್ನೂ ಬಹಿರಂಗಪಡಿಸುವುದಕ್ಕೆ ಹೋಗಬೇಡ ಸುಮ್ಮನಿದ್ದುಬಿಡು, ಏನಾದರೂ ತಿಂದರೆ ತಿಂದುಕೊಳ್ಳಲಿ ಎಂದರೆ ನಾನು ಸುಮ್ಮನಿದ್ದುಬಿಡುತ್ತೇನೆ.

ಶ್ರೀ ತನ್ವೀರ್ ಸೇಠ್ : ರೇವಣ್ಣನವರು ಗಂಭೀರವಾದ ವಿಚಾರಗಳನ್ನು ಸಭೆಯ ಮುಂದೆ ತರುತ್ತಿದ್ದಾರೆ. ನನಗನ್ನಿಸುತ್ತದೆ, ಇದಕ್ಕೆ ಒಂದು ಸದನ ಸಮಿತಿ ಮಾಡಿಬಿಡಿ. ಆಗ ಎಲ್ಲಾ ವಿಷಯಗಳನ್ನು ನೋಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ರೇವಣ್ಣನವರನ್ನೇ ಅಧ್ಯಕ್ಷರನ್ನಾಗಿ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡುವುದು ಬೇಡ. ತನ್ವೀರ್ ಸೇಠ್‌ರವರನ್ನೇ ಮಾಡಿ. ರೈತರಿಗೆ ಸಾಲ ಕೊಡುವಂಥ ಈ ಬ್ಯಾಂಕ್ ರಿಯಲ್ ಡೆವಲಪರ್ಸ್ ಎನ್ನುವ ಸಂಸ್ಥೆಗೆ 25 ಕೋಟಿ ಸಾಲವನ್ನು ಮಂಜೂರು ಮಾಡಿದ್ದು, ಸರ್ಕಾರದ ಕಾರ್ಯದರ್ಶಿಗಳು ದಿನಾಂಕ: 25–07–2008 ರಂದು ಒಂದು ಪತ್ರವನ್ನು ಬರೆಯುತ್ತಾರೆ. ಏನೆಂದರೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ನಿಯಮಿತ. (1) ನಬಾರ್ಡ್‌ನ ನಿಯಮವನ್ನು ಉಲ್ಲಂಘಿಸಿ, ರಿಯಲ್ ಡೆವಲಪರ್ಸ್ ಎಂಬ ಸಂಸ್ಥೆಗೆ 25 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಸಾಲವನ್ನು ಕೊಟ್ಟಿದ್ದೀರಿ. ಅಂದರೆ ಬೆಂಗಳೂರು ನಗರದಲ್ಲಿ 25 ಕೋಟಿ ರೂಪಾಯಿಗಳ ಸಾಲವನ್ನು ಡೆವಲಪರ್‌ಗಳಿಗೆ ನಿಯಮಗಳನ್ನು ಉಲ್ಲಂಘಿಸಿ ಕೊಡುತ್ತೀರಿ. ಇದನ್ನು one-time settlement ಮಾಡಿ ಎಂದು direction ಹೋಗುತ್ತದೆ.

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಮಾಡಿದವರು ಯಾರು ಎಂದು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಅದು ಯಾರು ಮಾಡಿದರೋ ನನಗೆ ಗೊತ್ತಿಲ್ಲ, ಕಾಪಿ ಕಳುಹಿಸಿಕೊಡುತ್ತೇನೆ, ನೀವೇ ನೋಡಿ.

ಶ್ರೀ ಬಿ.ಜೆ. ಪುಟ್ಟಸ್ವಾಮಿ : One-time settlementಗೆ ಯಾರು ಆರ್ಡರ್ ಮಾಡಿದರು, ಯಾರ ಕಾಲದಲ್ಲಿ ಇದು ಆಯಿತು ಎನ್ನುವುದನ್ನು ಹೇಳಿ.

ಶ್ರೀ ಟಿ.ಬಿ. ಜಯಚಂದ್ರ : ಅವರನ್ನು ಏಕೆ ಕೇಳುತ್ತೀರಿ? ಪ್ರಶ್ನೆಯನ್ನೂ ಅವರೇ ಕೇಳುತ್ತಾರೆ, ಉತ್ತರವನ್ನು ಅವರಿಂದಲೇ ಹೇಳಿಸುತ್ತೀರಾ?

ಶ್ರೀ ಹೆಚ್.ಡಿ. ರೇವಣ್ಣ : ನಿಮಗೆ ಎಲ್ಲಾ ದಾಖಲೆಗಳನ್ನು ಕಳುಹಿಸಿ ಕೊಡುತ್ತೇನೆ. ನಾನು ದಾಖಲೆಗಳಿಲ್ಲದೇ ಮಾತನಾಡುವುದಿಲ್ಲ. ಯಡಿಯೂರಪ್ಪ ಸಾಹೇಬರು ಹೇಳಿದರಲ್ಲ, ದಾಖಲೆಯನ್ನು ಅವರೇ ನಮಗೆ ಕಳುಹಿಸಿ ಕೊಟ್ಟಿದ್ದಾರೆ. ದಿನಾಂಕ: 25–07–2008 ರಂದು ಸರ್ಕಾರದ ಕಾರ್ಯ ದರ್ಶಿಗಳು, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು, ಇವರು ಬರೆದಿರುವ ಪತ್ರವಿದು. ಪತ್ರದ ಸಂಖ್ಯೆ: ಸಿಇ/52/ಸಿಎನ್ ಎಸ್/2008. ಸರ್ಕಾರದ ಕಾರ್ಯದರ್ಶಿಗಳು, ಹಣಕಾಸು ಇಲಾಖೆ ಇವರು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ಲಿಮಿಟೆಡ್, ಪಂಪ ಮಹಾಕವಿ ರಸ್ತೆ, ಬೆಂಗಳೂರು, ಇವರಿಗೆ ಬರೆಯುತ್ತಾರೆ. "ನಬಾರ್ಡಿನ ನಿಯಮಗಳನ್ನು ಉಲ್ಲಂಘಿಸಿ ರಿಯಲ್ ಡೆವಲಪರ್ಸ್ ಎಂಬ ಸಂಸ್ಥೆಗೆ 25 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಸಾಲವನ್ನು ಮಂಜೂರು ಮಾಡಿರುವ ಬಗ್ಗೆ." ದಿನಾಂಕ: 30–04–2008 ರಂದು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಮೆ. ರಿಯಲ್ ಡೆವಲಪರ್ಸ್ ಎಂಬ ಸಂಸ್ಥೆಗೆ 25 ಕೋಟಿ ರೂಪಾಯಿ ಪ್ರಾಜೆಕ್ಟ್ ಸಾಲವನ್ನು ಮಂಜೂರು ಮಾಡಿದ್ದು, ಸದರಿ ಸಾಲ ನೀಡಿಕೆಯಲ್ಲಿ ನಬಾರ್ಡಿನ ಕೆಳಕಂಡ ನಿಯಮಗಳ ಪಾಲನೆಯಾಗದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. (1) ಬ್ಯಾಂಕಿನ ಸಹಕಾರಿ ಘಟಕಗಳಿಗೆ ನೀಡುವ ಸಾಲಗಳು ಬ್ಯಾಂಕಿನ ಬಂಡವಾಳ ನಿಧಿಯ ಶೇಕಡ 25ಕ್ಕೆ ಮೀರಕೂಡದು. (2) ಸಹಕಾರೇತರ ಘಟಕಗಳಿಗೆ ಸಾಲವನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಕಳೆದ ಸಾಲಿನಲ್ಲಿ ಗಳಿಸಿದ ಗರಿಷ್ಠ ಆಂತರಿಕ ಸಂಪನ್ಮೂಲ (maximum internal resource) ಶೇಕಡ 25 ಕ್ಕಿಂತ ಹೆಚ್ಚಾಗಕೂಡದು. ವ್ಯಕ್ತಿಗಳಿಗೆ ಬ್ಯಾಂಕು ನೀಡುವ ಗರಿಷ್ಠ ಸಾಲವು 35 ಲಕ್ಷಗಳಿಗೆ ಮೀರಬಾರದು. 35 ಲಕ್ಷ ರೂಪಾಯಿಗಳಿಗೆ ಮೀರಬಾರದು ಎಂದು ನಬಾರ್ಡ್ ಗೈಡ್‌ಲೈನ್ಸ್ ಇದೆ. ಆ ಗೈಡ್‌ಲೈನ್ಸನ್ನು ಉಲ್ಲಂಘನೆ ಮಾಡಿ ಡೆವಲಪರ್ಸ್‌ಗೆ 25 ಕೋಟಿ ಸಾಲವನ್ನು ಕೊಡುತ್ತಾರಲ್ಲ ಸ್ವಾಮಿ. ಮುಂದುವರೆದು ಏನು ಬರೆಯುತ್ತಾರೆ ಎಂದರೆ, ಇನ್ನು ಮುಂದೆ ಇಂಥ ನಿಯಮಗಳ ಉಲ್ಲಂಘನೆಗೆ ಅವಕಾಶ ಕೊಡದಂತೆ ಎಚ್ಚರ ವಹಿಸುವಂತೆ, ...

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ರೇವಣ್ಣನವರೇ ಒಂದು ನಿಮಿಷ. ಅವರು ಕೊಟ್ಟಿರುವಂಥ ಸಬ್ಜೆಕ್ಟಿನ ಬಗ್ಗೆ ನಾನು ಚರ್ಚೆಗೆ ಹೋಗುವುದಿಲ್ಲ. ಅವರು ಮಾತನಾಡಲು ಒಂದು ಟೈಂ ಲಿಮಿಟ್ ಆದರೂ ಫಿಕ್ಸ್ ಮಾಡಿ. ರಾತ್ರಿ 12 ಗಂಟೆಯವರೆಗೂ ಅವರಿಗೆ ಕೊಡುತ್ತೀರಾ, ಕೊಟ್ಟುಬಿಡಿ. ನೀವು ರಾತ್ರಿ 12 ಗಂಟೆಯವರೆಗೆ ಮಾತನಾಡಿ. ಆಮೇಲೆ ಬಂದು ನಾವು ಕುಳಿತುಕೊಳ್ಳುತ್ತೇವೆ. ಒಂದು ಸಬ್ಜೆಕ್ಟನ್ನು ಇಟ್ಟುಕೊಂಡು ಈ ರೀತಿ ಮಾಡಿದರೆ ಹೇಗೆ? ಅವರು ಕೊಟ್ಟಿರುವಂಥ ಸಬ್ಜೆಕ್ಟಿಗೂ, ಅವರು ಮಾತನಾಡುತ್ತಿರುವುದಕ್ಕೂ ಏನಾದರೂ ಸಂಬಂಧ ಉಂಟೇ? ಅವರು ಸುಮ್ಮನೆ ಮಾತನಾಡುತ್ತಿರುತ್ತಾರೆ. ನೀವು ಅಲೋ ಮಾಡಿತ್ತಿರುತ್ತೀರಿ.

ಶ್ರೀ ಹೆಚ್.ಡಿ. ರೇವಣ್ಣ : ನಬಾರ್ಡ್‌ನವರು ಕೊಟ್ಟಂಥ ಗೈಡ್‌ಲೈನ್ಸ್ ಉಲ್ಲಂಘನೆ ಮಾಡಿ ಸಾಲ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಸಹಕಾರಿ ಕ್ಷೇತ್ರದ ಬಗ್ಗೆ ಪೂರ್ಣ ಚರ್ಚೆ ಮಾಡುವುದಕ್ಕೆ ನನಗೆ ಮೂರು ದಿನ ಅವಕಾಶ ಕೊಡಿ ಎಂದು ಕೇಳಿ, ಇವತ್ತಿನಿಂದ ಶುರು ಮಾಡಿಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಬಿಲ್ ಪಾಸ್ ಆಗಲಿ ಎನ್ನುವ ಉದ್ದೇಶದಿಂದ ಅವರು ಹೀಗೆ ಮಾತನಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ನಾನು ಹೇಳುತ್ತಿದ್ದೇನೆ. ನೀವು ಕೊಟ್ಟಿರುವ ಸಬ್ಜೆಕ್ಟ್‌ನಲ್ಲಿ ಏನಿದೆ? ಒಂದು ಪ್ರೆಸ್‌ಸ್ಟೇಟ್ ಮೆಂಟ್ ಬಗ್ಗೆ ಮಾತನಾಡಬೇಕಾಗಿದೆ ಎಂದು ಹೇಳಿದ್ದಿರಿ. ದಯವಿಟ್ಟು ಕನ್‌ಕ್ಲೂಡ್ ಮಾಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ದಾಖಲೆ ಸಮೇತ ಮಾತನಾಡಿ. ನೀವು ಕೊಟ್ಟಿರುವ ಸಬ್ಜೆಕ್ಟ್ ಏನೆಂದು ಓದಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಓದುತ್ತೇನೆ. "ರಾಜ್ಯದಲ್ಲಿರುವ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗ ಹಾಗೂ ಫಲಾನುಭವಿಗಳಿಗೆ ಸಿಗಬೇಕಾದ ಸೌಲಭ್ಯಗಳನ್ನು ಒಬ್ಬನೇ ಉಪಯೋಗಿಸುತ್ತಿದ್ದಾರೆಂದು ದಿನಾಂಕ:17/07/2012

ರಂದು ಮಾನ್ಯ ಸಹಕಾರ ಸಚಿವರ ಪತ್ರಿಕಾ ಹೇಳಿಕೆಯ ಕುರಿತು" ಈ ಪತ್ರಿಕಾ ಹೇಳಿಕೆಯಲ್ಲಿ ಏನು ಬಂದಿದೆ, ಅದನ್ನು ಬಿಟ್ಟು ನಾನು ಬೇರೆ ಏನನ್ನೂ ಹೇಳುವುದಕ್ಕೆ ಹೋಗಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಕಾನೂನು ತಜ್ಞನಲ್ಲ. ಒಂದು ಪತ್ರಿಕಾ ಹೇಳಿಕೆಯ ಮೇಲೆ ಮಾತನಾಡಲು 2–3 ಗಂಟೆಗಳ ಕಾಲ ಅವಕಾಶ ಕೊಟ್ಟರೆ ರಾಜ್ಯದ ರೈತರ ಕಥೆ ಏನು? ನೀರಾವರಿ ಬಗ್ಗೆ ಏನು? ನೀವು ಇದಕ್ಕೆ ಹೇಗೆ ಅವಕಾಶ ಕೊಟ್ಟಿರಿ? ನಾನು ನಿಮಗೆ ಮನವಿ ಮಾಡುತ್ತೇನೆ. ಇದು ಮಾತನಾಡಿ ಆಯಿತಲ್ಲ? ಇದಕ್ಕೆ ಉತ್ತರ ತೆಗೆದುಕೊಂಡು ದಯವಿಟ್ಟು ಮುಗಿಸಿ, ಬೇರೆ ಸಬ್ಜೆಕ್ಟನ್ನು ತೆಗೆದುಕೊಳ್ಳಬೇಕೆಂದು ನನ್ನ ಪ್ರಾರ್ಥನೆ.

(ಗೊಂದಲ)

ಅಧ್ಯಕ್ಷರು : ಕನ್‌ಕ್ಲೂಡ್ ಮಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಇನ್ನೊಂದು ಅರ್ಧ ಗಂಟೆಯಲ್ಲಿ ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಿಲ್ ಇದೆ ರೇವಣ್ಣನವರೇ.

ಶ್ರೀ ಹೆಚ್.ಡಿ. ರೇವಣ್ಣ : ರಾತ್ರಿ ಒಂದು ಗಂಟೆಯಾದರೂ ಸರಿ, ಆ ಬಿಲ್ ಅನ್ನು ನಿಮಗೆ ಪಾಸ್ ಮಾಡಿಕೊಡುತ್ತೇವೆ. Financial Bill ಮಾಡಿ ಕೊಟ್ಟಿದ್ದೇವೆ, ಎಲ್ಲವನ್ನೂ ಮಾಡಿ ಕೊಟ್ಟಿದ್ದೇವೆ. ಈ ಸದನದಲ್ಲಿ ನೀವು ಹೇಳಿದ ಹಾಗೆಲ್ಲ ಕೇಳಿದ್ದೇವಲ್ಲ?

ಶ್ರೀ ನೆ.ಲ. ನರೇಂದ್ರಬಾಬು : ನೀವು ತುಂಬ ಚೆನ್ನಾಗಿ ಹೇಳುತಿದ್ದೀರಿ. ಅದನ್ನು ಸ್ವಲ್ಪ ಫಾಸ್ಟ್ ಆಗಿ ಹೇಳಿಬಿಟ್ಟರೆ ಒಳ್ಳೆಯದು. ನಾವೂ ಸಹ ಮಾತನಾಡಲು ಕಾಯುತ್ತಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ : ಅವರು ಬಿಡುವುದಿಲ್ಲ, ಮಧ್ಯೆ ಮಧ್ಯೆ interfere ಆಗುತ್ತಾರಲ್ಲ, ನಾನೇನು ಮಾಡಲಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ರೇವಣ್ಣನವರು ಹೇಳುತ್ತಿರುವುದರ ಬಗ್ಗೆ ನನ್ನದೇನೂ ಅಭ್ಯಂತರವಿಲ್ಲ. ಅಪೆಕ್ಸ್ ಬ್ಯಾಂಕ್ ಸ್ವತಂತ್ರವಾಗಿ ಕೆಲಸ ನಿರ್ವಹಿಸುವಂಥ ಒಂದು ಸಂಸ್ಥೆ. ಅವರು ನಮ್ಮನ್ನೇನು ಅಂದರೆ ಸರ್ಕಾರ ವನ್ನೇನು ಕೇಳಿ ಮಾಡುವುದಿಲ್ಲ ಎನ್ನುವುದು ನಮಗಿಂತ ಚೆನ್ನಾಗಿ ನಿಮಗೆ ಗೊತ್ತು. 2008 ರಲ್ಲಿ ರಿಯಲ್ ಡೆವಲಪರ್ಸ್‌ಗೆ 25 ಕೋಟಿ ರೂಪಾಯಿ

ಸಾಲವನ್ನು ಕೊಟ್ಟಿದ್ದರೆ, ಅದನ್ನು ನಬಾರ್ಡ್ ವಿರೋಧ ಮಾಡಿದೆ. ಅಪೆಕ್ಸ್‌ನವರು ಕೊಟ್ಟ ಸಾಲದ ಬಗ್ಗೆ ಕೇಳಿದರೆ ಈ ಮನೆಯಲ್ಲಿ ನಾವು ಏನು ಉತ್ತರ ಕೊಡಬಹುದು? 2007–08ರಲ್ಲಿ ಯಾರು ಚೇರ್‌ಮನ್ ಆಗಿದ್ದರು, ಯಾವ ಸರ್ಕಾರವಿತ್ತು, ಎಂದು ನೋಡಬೇಕು. ಅದಕ್ಕೆ ಪುಟ್ಟಸ್ವಾಮಿ, ಯಡಿಯೂರಪ್ಪನವರು ಏನು ಉತ್ತರ ಕೊಡಬೇಕು? ಅಪೆಕ್ಸ್ ಬ್ಯಾಂಕಿನ ಸಾಲ ನೀಡಿಕೆಯಲ್ಲಿ ವ್ಯತ್ಯಾಸವಾಗಿದ್ದರೆ ನಬಾರ್ಡ್‌ನವರು ಕ್ರಮ ತೆಗೆದುಕೊಳ್ಳುತ್ತಾರೆ. ನಮಗೇನು ಅಧಿಕಾರವಿದೆ? ನೀವು ಹೇಳುತ್ತಿರುವುದು ನನಗೆ ಅರ್ಥವಾಗಲಿಲ್ಲ. ಅದಕ್ಕೆ ನಿಮಗೆ ಏನು ಬೇಕು ಎನ್ನುವುದನ್ನಾದರೂ ಹೇಳಿ. ಇಲ್ಲದಿದ್ದರೆ ಈ ರೀತಿ ಮೂರು ದಿವಸ ಬೇಕಾದರೂ ಮಾತನಾಡಬಹುದು.

(ಗೊಂದಲ)

ಅಧ್ಯಕ್ಷರು : ಕನ್‌ಕ್ಲೂಡ್ ಮಾಡಿ. ಇಲ್ಲದಿದ್ದರೆ ನಾನು ಉತ್ತರವನ್ನು ಕೊಡಿ ಎಂದು ಹೇಳುತ್ತೇನೆ ಅಷ್ಟೇ. ದಯವಿಟ್ಟು ಮುಕ್ತಾಯ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಇಂಥ ಒಂದು ಗಂಭೀರವಾದ ವಿಷಯವನ್ನು. . . . .

(ಗೊಂದಲ)

ಅಧ್ಯಕ್ಷರು : ಗಂಭೀರವಾದುದಾದರೂ ಈ ಸಬ್ಜೆಕ್ಟಿನಲ್ಲಿ ಅದು ಬರುವುದಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ನೀವು ಏನು ಪತ್ರಿಕಾ ಹೇಳಿಕೆ ಕೊಟ್ಟಿದ್ದೀರಿ, ಏನು ಕಥೆ ಎನ್ನುವುದು ನಮಗೇನೂ ಗೊತ್ತಿಲ್ಲ. It is a matter purely between you two people. ಇದನ್ನು ನಾವು ಸುಮ್ಮನೆ ಕೇಳಬೇಕೇ? ಏನೆಂದು ನಾವು ಕೇಳುವುದು?

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಮಾನ್ಯ ಜಯಚಂದ್ರರವರೆ, ಪತ್ರಿಕಾ ಹೇಳಿಕೆಗೆ ಸದನದಲ್ಲಿ ಚರ್ಚೆ ಮಾಡಿರುವುದು ಯಾವುದಾದರೂ ಇತಿಹಾಸ ಇದ್ದರೆ ನಾನು ಸ್ವಲ್ಪ ಕಲಿತುಕೊಳ್ಳೋಣ ಎಂದು ಕೇಳುತ್ತಿದ್ದೇನೆ. ಪ್ರತಿಯೊಂದು ವರದಿಗೂ ಸದನದಲ್ಲಿ ಚರ್ಚೆ ಮಾಡುವುದು ಎಲ್ಲಾದರೂ ಇದೆಯೇ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಪತ್ರಿಕಾ ಹೇಳಿಕೆ ಕೊಟ್ಟಿರುವುದರಲ್ಲಿ ಏನಾದರೂ ಲೋಪದೋಷ, ಸರ್ಕಾರದ ವೈಫಲ್ಯ, ಈ ತರಹದ್ದು

ಏನಾದರೂ ಇದ್ದರೆ ಪ್ರಶ್ನೆ ಬೇರೆ. ಏನು ಹೇಳಿಕೆ ಕೊಟ್ಟಿದ್ದೀರಿ ಎನ್ನುವುದು ನಮಗೆ ಗೊತ್ತಿಲ್ಲ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಇದರಲ್ಲಿ ಒಟ್ಟಾರೆ ಸಾರಾಂಶ ಏನೆಂದರೆ, ಸಚಿವರಾದ ಎರಡು ದಿವಸಗಳಲ್ಲಿ ಇವರು ನೇರವಾಗಿ ಯಡಿಯೂರಪ್ಪನವರ ಪರವಾಗಿ ಮಾಡಿದರೋ, ಯಡಿಯೂರಪ್ಪನವರ ವಿರುದ್ಧವಾಗಿ ಮಾಡಿದರೋ ಗೊತ್ತಿಲ್ಲ. ನಮ್ಮ ಜೆ.ಡಿ(ಎಸ್) ವಿರುದ್ಧ ಹೋದ ಕಡೆ ಎಲ್ಲ ಚರ್ಚೆಯಲ್ಲೂ ಭಾಗವಹಿಸುತ್ತಿದ್ದರು. ಭಾಗವಹಿಸಿ ಆದಮೇಲೆ ಇವರು ಏನು ಮಾಡಿದರೆಂದರೆ, ಸಚಿವರಾಗಿ, ಅವರ office ಗೆ ಪೂಜೆ ಮಾಡಿ ಈಚೆಗೆ ಬಂದ ಕೂಡಲೇ Statement ಕೊಟ್ಟರು. ಅದೇನೆಂದರೆ, ರೇವಣ್ಣನವರ ಕುರಿತಾಗಿಯೇ ಹೇಳಿಕೆ ಕೊಡುತ್ತಾರೆ, ಅದರಲ್ಲೇನೂ ಇಲ್ಲ. ಹಾಸನದ ಡೈರಿನಲ್ಲಿ ಬಹಳ ಅವ್ಯವಹಾರ ನಡೆದಿದೆ.....

(ಗೊಂದಲ)

ಅಧ್ಯಕ್ಷರು : ಏನಿದು? Conclude ಮಾಡಿ. ಸಚಿವರೆ, ಉತ್ತರ ನೀಡಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅಲ್ಲ, ಇದು ನನಗೆ ಕಂಡ ಹಾಗೆ ಸಚಿವರು ಆ ತಕ್ಷಣವೇ ರಾಜಕೀಯದ ದ್ವೇಷವನ್ನು ಮರೆತು 15 ದಿವಸಗಳಲ್ಲಿ ನಾನು ಒಂದು ಲಕ್ಷ ಜನರ ಪ್ರತಿನಿಧಿ ಎಂದು ಹೇಳಿಕೆ ಕೊಡಬೇಕಾದರೆ ಜವಾಬ್ದಾರಿ ಸ್ಥಾನದಲ್ಲಿರುವವರು ಜವಬ್ದಾರಿಯುತವಾಗಿ ಹೇಳಿಕೆ ಕೊಡಬೇಕಾಗುತ್ತದೆ. ಒಂದು ಲಕ್ಷ ಜನರ ಅಂದರೆ ಎಲ್ಲಾ ಫಲಾನುಭವಿಗಳ ಹಣವನ್ನು ಒಬ್ಬನೆ ತಿಂದು ಹಾಕುತ್ತಾನೆಂದು ಹೇಳಿದರೆ ಏನರ್ಥ? ಎಲ್ಲಿ ಆ ವ್ಯಕ್ತಿ?

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಯಾರಿಗೆ ಹೇಳಿದ್ದೇನೆ? ನೀವು ಸುಮ್ಮನೆ ಏತಕ್ಕೆ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಎಲ್ಲಾ ಪತ್ರಿಕೆಯಲ್ಲಿ ಬಂದಿದೆ.

(ಗೊಂದಲ)

ಅಧ್ಯಕ್ಷರು : ಇದನ್ನು conclude ಮಾಡೋಣ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : Yes. ನೀವು raise ಮಾಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಕಂದಾಯ ಸಚಿವರು) : ಶಿವಲಿಂಗೇಗೌಡರೆ, ಈ ರೀತಿಯ ಹೇಳಿಕೆ ರೇವಣ್ಣನವರಿಗೇ ಪುಟ್ಟಸ್ವಾಮಿಯವರು ಹೇಳಿದ್ದಾರೆ ಎಂದು ನಿಮಗೆ ಹೇಗೆ ಗೊತ್ತಾಯಿತು?

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಹೌದು, ನನಗೆ ಇದು ಅರ್ಥವಾಗುತ್ತದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನನ್ನ ಕಡೆಯಿಂದ point of order ಇದೆ.

(ಗೊಂದಲ)

ಅಧ್ಯಕ್ಷರು : ನೀವು point of order ಪ್ರಸ್ತಾಪಿಸಿದ್ದೀರಿ. ಹೇಳಿ. ನಾನು decision ಕೊಡುತ್ತೇನೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ನಿಯಮ 69ರಲ್ಲಿ ತಾವು ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿರಿ. ನಿಯಮ 69 ಏನು ಹೇಳುತ್ತದೆ 'Any Member desirous of raising discussion on a matter of urgent public importance may give a notice in writing to the Secretary specifying clearly and precisely the matter to be raised.' Is it a matter of such an importance? ತಾವು allow ಮಾಡಿದರೆ ನಾನು object ಮಾಡುವುದಿಲ್ಲ. There should be a limit. ಅವರು ಏನಾದರೂ ಇದು ತುಂಬಾ public importance ಎಂದು ಇದ್ದರೆ, let him raise it, let them reply. But ಇಷ್ಟೊಂದು discussion ಮಾಡುವುದು ಸರಿಯಲ್ಲ. ಬೇರೆ ವಿಚಾರಗಳು ಬಂದಾಗ discussion ಗೆ ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು : ಮಾನ್ಯ ಉಪನಾಯಕರಾದ ಜಯಚಂದ್ರರವರು ಪ್ರಸ್ತಾಪಿಸಿದಂಥ point of order ಅನ್ನು ಎತ್ತಿ ಹಿಡಿದು ಈ ಚರ್ಚೆಯನ್ನು ಇಲ್ಲಿಗೇ ಮುಕ್ತಾಯಗೊಳಿಸಿದ್ದೇನೆ.

(ಗೊಂದಲ)

ಅಧ್ಯಕ್ಷರು : ನಾನು ಹೇಳುವುದನ್ನು ಸ್ವಲ್ಪ ಕೇಳಿ. ಮಾನ್ಯ ಉಪನಾಯಕರಾದ ಜಯಚಂದ್ರರವರು ಪ್ರಸ್ತಾಪಿಸಿದ್ದಾರೆ. ನಾನು Ruling ಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು : ವಿರೋಧ ಪಕ್ಷದ ಉಪನಾಯಕರಾದ ಜಯಚಂದ್ರ ರವರು ಮಾಡಿದಂಥ ಕ್ರಿಯಾಲೋಪವನ್ನು ಎತ್ತಿಹಿಡಿದು ಈ ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸಿ ಮಂತ್ರಿಯವರು ಉತ್ತರ ಕೊಡಬೇಕೆಂದು ಸೂಚಿಸುತ್ತಿದ್ದೇನೆ. ಮಂತ್ರಿಯವರು ಉತ್ತರ ಕೊಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಅವಾಗಿನಿಂದ ತಾಳ್ಮೆಯಿಂದ ಕುಳಿತಿಲ್ಲವೇ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನಿಯಮ 69ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು : Ruling ಕೊಟ್ಟಾಯಿತು. ಈಗ ಮಂತ್ರಿಯವರು ಉತ್ತರ ಹೇಳಿ.

ಶ್ರೀ ಕೃಷ್ಣ ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಿನ್ನೆ ನನ್ನ starred questions ಸರ್ಕಾರದಿಂದ ಉತ್ತರ ಸಿಗದಿದ್ದಾಗ, ನಿಯಮ 69 ನಲ್ಲಿ ಇದೇ ವಿಷಯ ಬರುತ್ತದೆ, ಮಾತನಾಡಿ ಎಂದು ನಿನ್ನೆ ತಾವು ಹೇಳಿದ್ದಿರಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ, ನಾನು Ruling ಕೊಟ್ಟಿದ್ದೇನೆ.

ಶ್ರೀ ಕೃಷ್ಣ ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಮೂರು ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ವಸತಿ ಸಹಕಾರಿ ಸಂಘಗಳಲ್ಲಿ ಹಣ ದುರ್ಬಳಕೆಯಾಗಿದೆ ಅಥವಾ ಬೇರೆ ಅವ್ಯವಹಾರವಾಗಿದೆ ಎಂದು ಮಾನ್ಯ ಸಚಿವರು ಏನು ಹೇಳಿಕೆ ಕೊಟ್ಟಿದ್ದಾರೆ, ಅದಕ್ಕೆ ಪೂರಕವಾಗಿ ನಿನ್ನೆ ನನ್ನ ಚುಕ್ಕೆ ಗುರುತಿನ ಪ್ರಶ್ನೆ ಬಂದಿತ್ತು. 18ನೇ ತಾರೀಖಿಗೆ starred question ಆಗಿತ್ತು. ತದ ನಂತರ ತಾವು ಇದನ್ನು ಒಂದನೇ ತಾರೀಖಿಗೆ ವರ್ಗ ಮಾಡಿದಿರಿ. ನಿನ್ನೆ ಉತ್ತರ ಕೊಡಲಿಲ್ಲ. ಮಾನ್ಯ ಅಧ್ಯಕ್ಷರೆ, ಆ ಸಂದರ್ಭದಲ್ಲಿ ಈ ವಿಚಾರ Rule 69 ನಲ್ಲಿ ಬರುತ್ತಿದೆ, ಚರ್ಚೆ ಮಾಡಿ ಎಂದು ತಾವು ಹೇಳಿದಿರಿ. ಇನ್ನು ಎರಡು ನಿಮಿಷದಲ್ಲಿ ನಾನು ವಿಷಯವನ್ನು ಮಂಡನೆ ಮಾಡುತ್ತೇನೆ. ಮಾನ್ಯ ಸಚಿವರು ಏನು ಹೇಳಿಕೆ ಕೊಟ್ಟಿದ್ದಾರೆ, ಅದಕ್ಕೆ ಪೂರಕವಾಗಿ ಒಂದು ಉದಾಹರಣೆಯನ್ನು ಅವರಿಗೆ ಕೊಡುತ್ತೇನೆ. NTI Employees Housing Co operative Society ಎಂದು ಇದೆ. 21st October 1982 ರಲ್ಲಿ ಅಂದಿನ ಮುಖ್ಯಮಂತ್ರಿಯವರಿಗೆ ಅವರೊಂದು ಪತ್ರ ಬರೆಯುತ್ತಾರೆ. "As a pioneer Housing Co-operative Society to catering to the needs of mainly economically weaker sections of the Working class ಎಂದು ಹೇಳಿ the Members and other employees in Bangalore have developed a great deal of confidence in this society for the service rendered to them so far. Therefore, a heavy demand for more sites on the society." ಎಂದು ಕೇಳಿ, 'hence', they have approached the government, 'we approach your good selves, which is the Chief Minister with a hope in order to acquire these lands measuring 60x60 acres 5 guntas in favour of society ಎಂದು ಹೇಳಿ we are a no profit, no loss society ಎಂದು ಹೇಳಿ, the society, ಇದೊಂದನ್ನು ತಾವು ಗಮನಿಸಬೇಕು. The Society which is carrying out its programme as envisaged in the 20 point programme of our beloved Prime Minister and patronized by our Chief Minister of Karnataka ಎಂದು ಹೇಳಿ, working class ಎಂದು ಹೇಳಿ ಒಂದು ಪತ್ರದಲ್ಲಿ ಐದಾರು ಕಡೆ mention ಮಾಡಿದ್ದಾರೆ. ಇವರಿಗೋಸ್ಕರ ಸರ್ಕಾರ

ಸುಮಾರು 182 ಎಕರೆ ರೈತರಿಗೆ ಸೇರಿದಂಥ ಜಮೀನು, ಬಡವರಿಗೆ ಸೇರಿದಂಥ ಜಮೀನು, SC-ST ಜನಾಂಗಕ್ಕೆ ಸೇರಿದ ಜಮೀನನ್ನು ಬೆಂಗಳೂರಿನ ಹೆಬ್ಬಾಳದ flyover ನಿಂದ ಕೇವಲ ಒಂದು ಕಿ.ಮೀ. ದೂರದ ಒಳಗಡೆ ಸರ್ಕಾರ acquire ಮಾಡಿ working classes ನವರಿಗೆ ನಿವೇಶನಗಳನ್ನು ಕೊಡಿ ಎಂದು ಈ society ಯವರಿಗೆ ಹಸ್ತಾಂತರ ಮಾಡುತ್ತದೆ. ಇದು 1982ರ ಆಸುಪಾಸಿನಲ್ಲಿ ನಡೆದಿರುವಂಥದ್ದು. ಇವತ್ತು ನಾವು 2012ನೇ ಇಸವಿಯಲ್ಲಿದ್ದೇವೆ. ಈ Society ಗೆ ಸದಸ್ಯರಾದಂಥವರು 25 ವರ್ಷ ಕಳೆದಿದೆ, ಇವತ್ತಿಗೂ ಕೂಡ ಅವರಿಗೆ ನಿವೇಶನ ಕೊಟ್ಟಿಲ್ಲ. ಅದು ನನ್ನ ಕ್ಷೇತ್ರಕ್ಕೆ ಬರುವುದರಿಂದ ನಾಲ್ಕಾರು ಜನ ನನ್ನ ಹತ್ತಿರ ಬಂದು ಕಣ್ಣೀರಿಟ್ಟಿದ್ದಾರೆ. 25 ವರ್ಷ ಒಂದು National Textile Corporation ನಲ್ಲಿ ಕೆಲಸ ಮಾಡಿದಂಥ ಒಬ್ಬ ಉದ್ಯೋಗಿ ಈ society ಗೆ 25 ವರ್ಷಗಳ ಹಿಂದೆ Member ಆಗಿ 25 ವರ್ಷ ಕಾದು ಇವತ್ತಿಗೂ ಅವರಿಗೆ ಕೊಟ್ಟಿಲ್ಲ ಎಷ್ಟೋ ಜನ ಮನೋ ಕಾಯಿಲೆಯಿಂದ ಬಳಲುವ ಮಟ್ಟಿಗೆ ಬಂದಿದ್ದಾರೆ, ಮಾನಸಿಕ ಅಸ್ವಸ್ಥತೆಯಿಂದ ಬಳಲುವ ಮಟ್ಟಕ್ಕೆ ಬಂದಿದದಾರೆ. ಇದನ್ನು ಬಹಳ ಕಳಕಳಿ ಯಿಂದ, ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ಸದನದ ಗಮನಕ್ಕೆ ತರುತ್ತಿದ್ದೇನೆ,

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಕಳೆದ 22 ವರ್ಷಗಳಿಂದ ಅಧಿಕಾರದ ಲ್ಲಿದ್ದವರು ಯಾರು? 18 ವರ್ಷಗಳಿಂದ ಏನು ಮಾಡುತ್ತಿದ್ದೀರಿ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಏನು ಮಾತನಾಡುತ್ತಿದ್ದಾರೆ, ಅಧ್ಯಕ್ಷರೆ? ಮಂತ್ರಿಯಾದವರು ಈ ರೀತಿ ಮಾತನಾಡುವುದೆ?

(ಗೊಂದಲ)

ಅಧ್ಯಕ್ಷರು : ನೀವು ಮಾತನಾಡಿ ಮುಗಿಸಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ : Hon'ble Speaker Sir, this is not the way the Minister speaks, I have raised this issue in Public interest.

ಅಧ್ಯಕ್ಷರು : ಆಯಿತು ಮುಗಿಸಿ.

ಶ್ರೀ ಕೃಷ್ಣ ಬೈರೇಗೌಡ : ಆ ತರಹ ಉತ್ತರ ಕೊಟ್ಟರೆ ನಾವು ಏನೆಂದು ಮಾತನಾಡಿ ಮುಗಿಸುವುದು? ನಾನು ಏನಾದರೂ, ಎಲ್ಲಾದರೂ ಎಲ್ಲರ

ಮೇಲೆ ಮಾತನಾಡಿದ್ದೇನೆಯೇ ಹೇಳಿ? ನಾನು ಈ ಸರ್ಕಾರದ ಬಗ್ಗೆ ಮಾತನಾಡಲೇ ಇಲ್ಲ. ತಾವು ಏತಕ್ಕೆ ಈ ತರಹದ ಭಾವನೆಗೆ ಒಳಗಾಗುತ್ತಿದ್ದೀರಿ? ಸಚಿವರು ಈ ರೀತಿ ನಡೆದುಕೊಳ್ಳುವುದನ್ನು ನಾನು ನಿನ್ನೆಯಿಂದ ನೋಡುತ್ತಿದ್ದೇನೆ. ಹೊಸ ಸಚಿವರಾಗಿ ಬಂದಿದ್ದಾರೆ. ವಯಸ್ಸಿನಲ್ಲಿ ನಾವು ಚಿಕ್ಕವರಿರಬಹುದು. ಆದರೆ, ನಾನೊಬ್ಬ ಶಾಸಕನಾಗಿ ಆ ಕ್ಷೇತ್ರದ ಪ್ರತಿನಿಧಿಯಾಗಿ ಕೇಳುವ ಹಕ್ಕಿದೆ. ನಾನು ನಿಮ್ಮ ಸರ್ಕಾರದ ಮೇಲೆ ಬೆರಳು ಮಾಡಲೇ ಇಲ್ಲ. ತಾವು ಏತಕ್ಕೆ ಈ ತರಹ ಉದ್ರೇಕಕ್ಕೆ ಒಳಗಾಗುತ್ತಿದ್ದೀರಿ? ಜನರು ನಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿರುವುದು ಸಮಸ್ಯೆಯನ್ನು ಪ್ರತಿಬಿಂಬಿಸಿ ಎಂದು. ನಮ್ಮವರೇ ತಪ್ಪು ಮಾಡಿರಬಹುದು ಅಥವಾ ಯಾರೇ ತಪ್ಪು ಮಾಡಿರಬಹುದು. ನಾನು ನಿನ್ನೆಯೇ ಹೇಳಿದ್ದೇನೆ.

ಅಧ್ಯಕ್ಷರು : Please, subject ಮೇಲೆ ಮಾತನಾಡಿ.

ಶ್ರೀ ಕೃಷ್ಣ ಭೈರೇಗೌಡ : ಮಾನ್ಯ ಅಧ್ಯಕ್ಷರೆ, 25 ವರ್ಷಗಳಲ್ಲಿ ಬೇಕಾದಷ್ಟು ಸರ್ಕಾರಗಳು ಬಂದು ಹೋಗಿವೆ. 1982 ರಲ್ಲಿ ಬಹಳ ಗೌರವಾನ್ವಿತರು, ಇವತ್ತಿಗೂ ನಾವು ಸನ್ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಗೌರವ ಕೊಡುತ್ತೇವೆ. ಅವರು ಮುಖ್ಯಮಂತ್ರಿಯಾಗಿದ್ದರು. ಅದಾದ ಮೇಲೆ ಬೇಕಾದಷ್ಟು ಜನ ಬಂದು ಹೋಗಿದ್ದರೆ. ಯಾರು ಮಾಡಿದರು, ಯಾರು ಮಾಡಲಿಲ್ಲ ಎನ್ನುವ ಪ್ರಶ್ನೆ ಅಲ್ಲ ಇಲ್ಲ. ಅಲ್ಲಿ ಸಾಕಷ್ಟು ಸಮಸ್ಯೆಗಳು ಬಂದವು. ಅದರಲ್ಲಿ Court litigations ಆಯಿತು. ಏಕೆ ಆಯಿತೆಂದು ಹೇಳಿದರೆ ನಿಮ್ಮಿಂದ ಅಲ್ಲ, ಸರ್ಕಾರದಿಂದ ಅಲ್ಲ, ತಿಳಿದುಕೊಳ್ಳಿ. ಆ ಸಂಸ್ಥೆಯನ್ನು ನಡೆಸುತ್ತಿರುವ ಆಡಳಿತ ಮಂಡಳಿ ಏನಿದೆ, ಅವರು ಮಾಡಿದ ತಪ್ಪುಗಳಿಂದ ಇವತ್ತಿಗೂ ಜನಗಳಿಗೆ ನಿವೇಶನ ಸಿಗಲಿಲ್ಲ. ನಾನು ಅವರ ಬಗ್ಗೆ ಹೇಳುತ್ತಿದ್ದರೆ ನೀವು ಏಕೆ ನಿಮ್ಮ ಬಗ್ಗೆ ತಿಳಿದುಕೊಳ್ಳುತ್ತಿದ್ದೀರಿ? ನೀವಿನ್ನೂ ಸಚಿವರಾಗಿ ಎರಡು ದಿನಗಳಾಗಿಲ್ಲ ಆಗಲೇ ಹೀಗಾದರೆ ಹೇಗೆ? ಹಾಗಾಗಿ, ಈ ಸಹಕಾರ ಸಂಘ ಏನಿದೆ, ರೈತರ ಜಮೀನನ್ನು ಸರ್ಕಾರ ವಶಪಡಿಸಿಕೊಂಡು ಅವರಿಗೆ ಕೊಟ್ಟಿತು. Working class ಜನರಿಗೆ ನಿವೇಶನ ಕೊಡಿ ಎಂದು ಹೇಳಿ 25 ವರ್ಷಗಳಾಯಿತು. ಎಷ್ಟೋ ಜನ ಸತ್ತು ಹೋಗಿದ್ದಾರೆ, ಇವತ್ತಿಗೂ ಸೈಟ್ ಸಿಕ್ಕಿಲ್ಲ. ಎಷ್ಟೋ ಜನ ಹೋಗಿ ಮಾನಸಿಕ ಕಾಯಿಲೆಗಳಿಂದ ಬಳಲುವಂಥ ಮಟ್ಟಕ್ಕೆ ಬಂದಿದಾರೆ. ಇವತ್ತಿಗೂ ಅವರಿಗೆ ಸೈಟ್ ಸಿಕ್ಕಿಲ್ಲ. ನಾನು ಸರಳವಾಗಿ ತಮಗೊಂದು ಪ್ರಶ್ನೆ ಕೇಳಿದೆ. ಆ ಬಡಾವಣೆಗೆ BDA approval ಕೊಟ್ಟ

ನಂತರ ಅವರು ಸದಸ್ಯರಿಗೇ ನಿವೇಶನಗಳನ್ನು ಕೊಟ್ಟಿದ್ದಾರೆಯೇ? ಸದಸ್ಯರಲ್ಲ ದಂಥವರಿಗೆ ಕೊಟ್ಟಿದ್ದಾರೆಯೇ? ಎಂದು ಕೇಳಿದ್ದೆ. ಇದೇನು ದೊಡ್ಡ ಪ್ರಶ್ನೆಯೇ? ಅದಕ್ಕೆ ಉತ್ತರ ಕೊಡುವುದಕ್ಕಾಗದೆ ನೀವು ಈ ರೀತಿ ಮಾತನಾಡಿದರೆ ನಾನೇನು ಹೇಳಬೇಕು? ಮಾನ್ಯ ಯಡಿಯೂರಪ್ಪನವರು ಆಗಲೇ ನಿಂತುಕೊಂಡು ಒಂದು ಮಾತನ್ನು ಹೇಳಿದ್ದಾರೆ. ಏನು ತಪ್ಪಾಗಿದೆ ಹೇಳಿ, ಅದಕ್ಕೆ ನಾನು ಉತ್ತರ ಕೊಡಿಸಿ, ಅವರಿಗೆ ಸರಿದಾರಿಗೆ ತರುವುದು ನನ್ನ ಜವಾಬ್ದಾರಿ ಎಂದು ಹೇಳಿದ್ದಾರೆ. ತಮ್ಮ ಮುಖಾಂತರ ನಾನು ಅವರಲ್ಲೂ ಮನವಿ ಮಾಡುತ್ತೇನೆ ಸರ್, ನಾನು ಕೇಳುವುದು ಇಷ್ಟೇ, ಅವರು BDA approval ಸಿಕ್ಕಿದ ನಂತರ ಸದಸ್ಯರಿಗೆ ಬಿಟ್ಟು, ಜೇಷ್ಠತೆಯನ್ನು ಬಿಟ್ಟು ಬೇರೆ ಯಾರಿಗಾದರೂ ನಿವೇಶನಗಳನ್ನು ಕೊಟ್ಟಿದ್ದರೆ, ಆ ಸಹಕಾರ ಸಂಘವನ್ನು ತಾವು supersede ಮಾಡುತ್ತೀರಾ? Simple ಆಗಿ ಹೇಳಲಿ. ನಾವೇನೂ ಕೇಳುತ್ತಿಲ್ಲ. ಯಾರು ಆ ಸದಸ್ಯರಿದ್ದರೆ, ಅವರಿಗೆ ನಿವೇಶನ ಸಿಗಬೇಕು. ಅವರಿಗೆ ಯಾರಿಗಾದರೂ. . . . .

ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ತನಿಖೆಯಾಗಬೇಕು. ದುರುಪ ಯೋಗವಾಗಿದ್ದರೆ ಕ್ರಮ ತೆಗೆದುಕೊಳ್ಳಬೇಕು ಎಂದು ನಾನೂ ನಿಮ್ಮ ಜೊತೆಗೆ ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : Thank you.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರನ್ನು classify ಮಾಡಬೇಕು?

ಶ್ರೀ ಹೆಚ್.ಡಿ. ರೇವಣ್ಣ : Correct sir,

ಶ್ರೀ ಕೃಷ್ಣ ಬೈರೇಗೌಡ : ನಾನು ಯಾರನ್ನೂ blame ಮಾಡಲಿಲ್ಲವಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ನಿಮ್ಮ ಕಾಲದವು ಯಾವುದೂ ಇಲ್ಲ ಸಾರ್.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೃಷ್ಣ ಬೈರೇಗೌಡರವರೆ, ಅಂಕಿ ಅಂಶಗಳ ಬಗ್ಗೆ ಬಹಳ ದೀರ್ಘವಾಗಿ ಮಾತನಾಡುತ್ತಿದ್ದಾರೆ, ಪುಟ್ಟಸ್ವಾಮಿ ಯವರೆ, ಅವರೇನು ಮಾತನಾಡುತ್ತಾರೆಂಬುದನ್ನು ಸ್ವಲ್ಪ ಶಾಂತವಾಗಿ ಕೇಳಿ ಎಂದು ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ಅದು Correct sir.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಸಮಸ್ಥೆ ಬಗ್ಗೆ ತತ್ ಕ್ಷಣ ಉತ್ತರ ಕೊಡುವುದಕ್ಕೆ ಪುಟ್ಟಸ್ವಾಮಿ ಜಾಗದಲ್ಲಿ ನೀವಿದ್ದರೂ ಸ್ವಲ್ಪ ಕಷ್ಟವೇ. ತನಿಖೆ ಮಾಡಿಸೋಣ. ಅದು ನಿಜವಾಗಿಯೂ ನೀವು ಹೇಳಿದಂತೆ ಸತ್ಯ

ಸಂಗತಿಗಳಿದ್ದರೆ, ಈಗ ಬದುಕಿರುವವರಿಗಾದರೂ ನ್ಯಾಯ ಸಿಗಲಿ. ಅದನ್ನು supersede ಮಾಡಿ, ಇಂಥವು ನಡೆಯಕೂಡದು, ಅದಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎನ್ನುವ ದಿಟ್ಟ ತೀರ್ಮಾನವನ್ನು ಸರ್ಕಾರ ತೆಗೆದು ಕೊಳ್ಳಬೇಕು ಎಂಬ ಒತ್ತಾಯವನ್ನು ನಾನೂ ನಿಮ್ಮ ಪರವಾಗಿ ಸರ್ಕಾರಕ್ಕೆ ಮಾಡುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ : ಧನ್ಯವಾದಗಳು. ತನಿಖೆಗಳು ನಡೆದಿವೆ. ಮಾನ್ಯ ರೇವಣ್ಣನವರು ಹೇಳಿದ್ದಾರೆ. ಇದು 64ರ ಅಡಿಯಲ್ಲಿ ತನಿಖೆಗಳು ನಡೆಯುತ್ತಲೇ ಇವೆ. ನಾನು ಇದನ್ನು ಮಾನ್ಯ ಹಿರಿಯರ ಗಮನಕ್ಕೆ ತರಬಯ ಸುತ್ತೇನೆ. ತನಿಖೆಗಳು ನಡೆಯುತ್ತಲೇ ಇವೆ. ನಾನು Registrar of Co-operative Society ಗೆ ಫೋನ್ ಮಾಡಿ ಇವರು ಯಾರ್ಯಾರಿಗೆ ಸೈಟ್ ಅನ್ನು ಕೊಟ್ಟಿದ್ದಾರೆನ್ನುವ ಮಾಹಿತಿ ಕೊಡಿ ಎಂದರೆ, ಅವರು ಆ ತರಹ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಇದಕ್ಕೇನು ಹೇಳುತ್ತೀರಿ? Non-members RTI ಅಡಿಯಲ್ಲಿ ಕೇಳುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಇದೆಲ್ಲಾ ಉದ್ಧಟತನ ಬಿಟ್ಟರೆ ಬೇರೆ ಇನ್ನೇನೂ ಇಲ್ಲ. ಅದಕ್ಕೋಸ್ಕರ ನಾವು ಉದ್ವೇಗದಿಂದ ಮಾತನಾಡುತ್ತಿದ್ದೇವೆ. ಎಲ್ಲೋ ಒಂದು ಕಡೆ ಮಾನ್ಯ ಸಚಿವರಿಗೆ ಇದೆಷ್ಟು ವಿಚಾರ ಗೊತ್ತಿದೆಯೋ, ಇಲ್ಲವೋ ಗೊತ್ತಿಲ್ಲ. ನಮಗೇನು ಶಂಕೆ ಬರುತ್ತದೆಂದರೆ, ಎಲ್ಲಾ ವ್ಯವಸ್ಥಿತವಾಗಿ ಮುಚ್ಚಿ ಹಾಕುವ ಪ್ರಯತ್ನ ನಡೆಯುತ್ತಿದೆಯೆಂದು. ನಾನು ಕೇಳಿರುವಂಥ ಪ್ರಶ್ನೆ ಬಹಳ ಸರಳ ಇದೆ. ತಮಗೆ ಕೊಡುತ್ತೇನೆ, ತಾವೇ ಬೇಕಾದರೆ ಕೇಳಿ. ಇದನ್ನು ಓದಿ ನೋಡಿ. ಇದರಲ್ಲಿ ಉತ್ತರ ಕೊಡುವುದಕ್ಕೆ ಬಹಳ ಸಮಸ್ಯಾತ್ಮಕವಾದಂಥದ್ದೇನಾದರು ಇದೆಯಾ ಎಂದು ನೋಡಿ. ನಾನು ಪ್ರಶ್ನೆ ಕೇಳಿ 20 ದಿನಗಳಾಗಿವೆ. ಉತ್ತರ ಕೊಡಲಿಲ್ಲವೆಂದರೆ ನನಗೇನು ಭಾವನೆ ಬರಬೇಕು? ಎಲ್ಲೋ ಒಂದು ಕಡೆ ಇದನ್ನು ವ್ಯವಸ್ಥಿತವಾಗಿ ಮುಚ್ಚಿಹಾಕುವ ಪ್ರಯತ್ನ ನಡೆಯುತ್ತಿದೆ ಎನ್ನುವ ಭಾವನೆ ಬರಬೇಕು. ನನಗೆ ಜನಗಳಿಂದ, ರೈತರಿಂದ ತಿಳಿದು ಬಂದ ಮಾಹಿತಿ ಏನೆಂದರೆ, ಸುಮಾರು 180 ಸೈಟ್‌ಗಳನ್ನು ಸದಸ್ಯರಲ್ಲದಿರುವವರಿಗೆ ಈ ಸಹಕಾರ ಸಂಘ ಮಾರಾಟ ಮಾಡಿದೆ ಎನ್ನುವುದು ನನ್ನ ಹತ್ತಿರ ಇರುವ ಮಾಹಿತಿ. ಸದಸ್ಯರಿಗೆ ಬಿಟ್ಟುಕೊಟ್ಟಿದ್ದಾರೆ ಎನ್ನುವ ಮಾಹಿತಿ ಇದೆ. ಆದರೆ, ನಾನು ವಿಚಾರ ತಿಳಿದುಕೊಳ್ಳದೇ ಆರೋಪ ಮಾಡಬಾರದೆಂದು ಪ್ರಶ್ನೆ ಕೇಳಿದೆ. ಉತ್ತರವನ್ನೇ ಕೊಡುವ ಹಾಗಿಲ್ಲ. ಆಗ ನಾವು ಏನೂ ಮಾತನಾಡುವ ಹಾಗೇ

ಇಲ್ಲ. ನಿಮ್ಮ constituency ಯಲ್ಲಿದೆ ಎಂದು ನನ್ನಮನೆ ಬಾಗಿಲಿಗೆ ಬಂದು ಜನ ಕೇಳುತ್ತಾರೆ. ಅದು ನನಗೇನೂ ಸಂಬಂಧವಿಲ್ಲ. ಸರ್ಕಾರ ಅವರಿಗೆ land acquire ಮಾಡಿ ಕೊಟ್ಟಿದೆ. ಏಕೆಂದರೆ, ಬಡವರಿಗೆ ಸೈಟ್ ಕೊಡಿ, ಎಲ್ಲರಿಗೂ BDA site ಕೊಡುವುದಕ್ಕಾಗುವುದಿಲ್ಲವೆನ್ನುವ ಕಾರಣಕ್ಕೋಸ್ಕರ acquire ಮಾಡಿ ಆ ಸಹಕಾರ ಸಂಘಕ್ಕೆ ಕೊಟ್ಟಿರುವಂಥದ್ದು. ಆ ಜನ ಬಂದು ನಮ್ಮನ್ನು ಕೇಳಿದರೆ, ನಾವು ಉತ್ತರ ಕೊಡುವುದಕ್ಕಾಗುತ್ತಿಲ್ಲ. ಇಷ್ಟು ದಿನ ಏಕೆ ಸುಮ್ಮನಿದ್ದೀರಿ ಎಂದು ಮಾನ್ಯ ಸಚಿವರು ನನಗೆ ಕೇಳಿದರು. ಏನೋ ಆ ಸೊಸೈಟಿಯಲ್ಲಿ ತಪ್ಪುಗಳಾಗಿರಬಹುದು. ಮತ್ತೆ ತಾವೇನಾದರೂ ಕೇಳಿದರೆ ಸದಸ್ಯರಿಗೆ ನಿವೇಶನ ಸಿಗುವುದು ಇನ್ನೂ ತಡವಾಗುತ್ತದಲ್ಲ ಎನ್ನುವ ಕಾರಣಕ್ಕಾಗಿ ನಾವು ಎಲ್ಲೋ ಒಂದು ಕಡೆ ಸಮಾಧಾನದಿಂದ ಹೋದೆವು. ಆದರೆ, ಈಗ ಅವರು ಅವರ ಸದಸ್ಯರಿಗೇ ನಿವೇಶನ ಕೊಡುವುದು ಬಿಟ್ಟು ಯಾರಿಗೋ ಮಾರಾಟ ಮಾಡಿಕೊಳ್ಳುತ್ತಿದ್ದರೆ ನಾವೇಕೆ ಸುಮ್ಮನಿರಬೇಕು? ಇದನ್ನು ಅರ್ಥ ಮಾಡಿಕೊಳ್ಳದೆ ಸಚಿವರು ಇದಕ್ಕೊಂದು ರಾಜಕೀಯ ಬಣ್ಣ ಕೊಡುತ್ತಾರೆಂದರೆ ಬಹಳ ದುರಾದೃಷ್ಟಕರ. ಅದಕ್ಕೋಸ್ಕರ, ನೋಡಿ ಸ್ವಾಮಿ, ನಾನು ಇಲ್ಲಿ ನಿಮ್ಮ ಮೇಲೆ ಆರೋಪ ಮಾಡುವುದಕ್ಕೆ ನಿಂತಿಲ್ಲ. ನನ್ನ ಮಟ್ಟ ಅಂತದ್ದಲ್ಲ, ಅಂಥ ಹಿನ್ನೆಲೆಯಿಂದ ಬಂದವನೂ ನಾನಲ್ಲ. ನಮ್ಮ ಸರ್ಕಾರವೂ ತಪ್ಪು ಮಾಡಿದೆ, ನಿಮ್ಮ ಸರ್ಕಾರವೂ ತಪ್ಪು ಮಾಡಿದೆ ಎಂದು ನಾನು ನಿನ್ನೆಯೂ ಹೇಳಿದ್ದೇನೆ. ನಾನು ನನ್ನಿಂದಲೇ ಶುರು ಮಾಡಿಕೊಳ್ಳುತ್ತೇನೆ, ಗೊತ್ತಾಯಿತೆ? ದಯವಿಟ್ಟು, ಆ ರೀತಿ ನೀವು TV ಮುಂದೆ ಬೇಕಾದರೆ ಮಾತನಾಡಿ, ಇಲ್ಲಿ ಮಾತನಾಡುವುದಲ್ಲ. ಹಾಗಾಗಿ, ನಾನು ಸರ್ಕಾರದಲ್ಲಿ ತಮ್ಮ ಮೂಲಕ ಪ್ರಾರ್ಥನೆ ಮಾಡುವುದೇನೆಂದರೆ, ಪಾಪ, ಯಾರು 25 ವರ್ಷಗಳಿಂದ ನಿವೇಶನಕ್ಕಾಗಿ ಕಾದಿದ್ದಾರೆ ಅವರಿಗೆ ನಿವೇಶನ ಸಿಗಲಿ. ಆ ಜ್ಯೇಷ್ಠತೆಯನ್ನು ಬಿಟ್ಟು ಅವರಿಗೆ ಕೊಟ್ಟಿದ್ದರೆ, ನಾನು ಹಿರಿಯರಲ್ಲಿ ಕೇಳುವುದೇನೆಂದರೆ, ಈ ಪ್ರಶ್ನೆ ಅರ್ಧ ಗಂಟೆಯಲ್ಲಿ ಇತ್ಯರ್ಥವಾಗುತ್ತದೆ. Last 2 years ನಲ್ಲಿ ಯಾರಿಗೆ allotment ಕೊಟ್ಟಿದ್ದಾರೆ ಎಂದು file ತೆಗೆಸಿ ನೋಡಿಬಿಟ್ಟರೆ ಎಲ್ಲಾ ಅರ್ಧ ಗಂಟೆಯಲ್ಲಿ ಸಿಕ್ಕಿಹೋಗುತ್ತದೆ. ಇದಕ್ಕೆ ಯಾವ Rule 64 ಬೇಕಾಗಿಲ್ಲ. ಇಷ್ಟಕ್ಕೆ 6 ತಿಂಗಳು Rule 64 ಮಾಡಿ ಮುಚ್ಚಿಹಾಕುತ್ತಾರೆ. ನಡೆಯುವಂಥದ್ದು ಇದೇ ಕೆಲಸ. ಅದಕ್ಕಾಗಿ ತಾವು ಭರವಸೆ ಕೊಟ್ಟಿದ್ದೀರಿ. ದಯವಿಟ್ಟು, ತರಿಸಿ ತಾವೇ ತೀರ್ಮಾನ ಮಾಡಿ.

ಅವರೇನಾದರೂ ತಪ್ಪು ಮಾಡಿದ್ದರೆ, supersede ಮಾಡಿ. ನಿಜವಾದ ಜನರಿಗೆ ಸೈಟ್ ಸಿಗುವ ತರಹ ಮಾಡಿ ಎಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಸಚಿವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ನಾನು Ruling ಕೊಟ್ಟಿದ್ದೇನೆ, ಸಚಿವರು ಉತ್ತರ ಕೊಡಲಿ.

(ಗೊಂದಲ)

ಅಧ್ಯಕ್ಷರು : ನಾನು Ruling ಕೊಟ್ಟಿದ್ದೇನೆ, ಆಗಾಗ್ಗೆ ನೀವು ಎದ್ದು ನಿಂತರೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಇಲ್ಲ, ಆಗುವುದಿಲ್ಲ. ಈ ತರಹ ಆದರೆ ಸದನ ನಡೆಸುವುದು ಹೇಗೆ? ನಾನು Ruling ಕೊಟ್ಟಿದ್ದೇನೆ, please, ಸಹಕರಿಸಿ.

(ಗೊಂದಲ)

ಅಧ್ಯಕ್ಷರು : ನೀವು ಉತ್ತರ ಹೇಳದಿದ್ದರೆ, ಮುಂದಿನ subject ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ದಯಮಾಡಿ, ನಾನು 10 ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು : ಉತ್ತರ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಸಾರ್.. . . .

ಅಧ್ಯಕ್ಷರು : No.

ಶ್ರೀ ಹೆಚ್.ಡಿ. ರೇವಣ್ಣ : ಅವರು ಹೇಳಲಿ. ದಯಮಾಡಿ, 10 ನಿಮಿಷ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : No. ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಸಾರ್, ದಯಮಾಡಿ, 10 ನಿಮಿಷ ಅವಕಾಶ ಕೊಡದೇ ಹೋದರೆ ನಾನು ಇಂಥ ಒಂದು ಮಹತ್ವವಾದ. . . . .

ಅಧ್ಯಕ್ಷರು : ಉತ್ತರ ಹೇಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಇಲ್ಲದೇ ಹೋದರೆ ಧರಣಿ ಕೂರಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಒಂದು ಸಲ Ruling ಕೊಟ್ಟ ಮೇಲೆ ಆಯಿತು. ಮತ್ತೆ ಪುನಃ ಪುನಃ ಇದು ಮುಗಿಯದ ಕಥೆ.

(ಗೊಂದಲ)

ಅಧ್ಯಕ್ಷರು : ಬೇರೆಯವರೂ ಇಲ್ಲಿ ಸಾಕಷ್ಟು ಸದಸ್ಯರು ಕಾಯುತ್ತಾ ಕುಳಿತಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಹತ್ವದ್ದು ಇದೆ.

(ಗೊಂದಲ)

ಅಧ್ಯಕ್ಷರು : ಸಮಯ ಕಡಿಮೆ ಇದೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ದಯಮಾಡಿ, ಇನ್ನು 10 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ. ಜನರಿಗೆ ಹೇಳಬೇಕು.

(ಗೊಂದಲ)

ಅಧ್ಯಕ್ಷರು : ಇದು ಯಾವುದು important ಎಂದು ಹೇಳಿದ್ದಾರೆ?

(ಗೊಂದಲ)

ಅಧ್ಯಕ್ಷರು : point of order ಎತ್ತಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಇಲ್ಲದೇ ಹೋದರೆ ಧರಣಿ ಕೂರಬೇಕಾಗುತ್ತದೆ.

(ಗೊಂದಲ)

ಶ್ರೀ ಹೆಚ್.ಡಿ. ರೆವಣ್ಣ : 10 ನಿಮಿಷ ಟೈಂ ಕೊಡದೇ ಹೋದರೆ ನಾನು ಧರಣಿ ಕುಳಿತುಕೊಳುತ್ತೇನೆ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ (ಸಹಕಾರ ಸಚಿವರು) : ನಾನೇನು ಹೇಳಿದ್ದೇನೆಂದರೆ, ಖಂಡಿತವಾಗಿ ಅದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

(ಗೊಂದಲ)

(ಈ ಹಂತದಲ್ಲಿ ಶ್ರೀ ಹೆಚ್.ಡಿ. ರೇವಣ್ಣರವರ ಮುಂದಾಳತ್ವದಲ್ಲಿ ಜೆ.ಡಿ.(ಎಸ್) ಸದಸ್ಯರು ಸದನದ ಬಾವಿಗೆ ಆಗಮಿಸಿದರು)

ಅಧ್ಯಕ್ಷರು : ಈ ತರಹ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ನಾನು ಉತ್ತರ ಕೊಡುತ್ತೇನೆ, ಇಷ್ಟೇ, ಅಲ್ಲಿ ಕೊಟ್ಟಂಥ ಇದನ್ನು ಒಪ್ಪಬಾರದು.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಕಾನೂನು ಪ್ರಕಾರ ಎಂತಲೆ ನಾನು ಹೇಳಿದ್ದೇನೆ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಕ್ರಮ ತೆಗೆದುಕೊಳ್ಳುತ್ತೇನೆ ಎಂದು ತಮ್ಮ ಮೂಲಕ ನಾನು ಕೃಷ್ಣ ಬೈರೇಗೌಡರವರಿಗೆ ಹೇಳಬಯಸುತ್ತೇನೆ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಮಾನ್ಯ ರೇವಣ್ಣನವರು. . . . .

(ಗೊಂದಲ)

ಅಧ್ಯಕ್ಷರು : ಈ ತರಹ ಮಾಡಿದರೆ ಹೇಗೆ ಸದನ ನಡೆಸುವುದು?

(ಗೊಂದಲ)

ಅಧ್ಯಕ್ಷರು : ಒಂದು ಸಲ Ruling ಕೊಟ್ಟ ಮೇಲೆಯೂ ನೀವು ಹೀಗೆ ಮಾಡಬಾರದು. ಮತ್ತೆ ಬಾವಿಗೆ ಬರುವುದು ಎಂದರೆ ಯಾವ ಅರ್ಥವೂ ಇಲ್ಲ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಪತ್ರಿಕೆಯ ಹೇಳಿಕೆಯ. . . . .

(ಗೊಂದಲ)

ಅಧ್ಯಕ್ಷರು : ನೀವು ಎಷ್ಟು ಹೊತ್ತು ಮಾತನಾಡಿದ್ದೀರಿ. . . . .

(ಗೊಂದಲ)

ಅಧ್ಯಕ್ಷರು : ಆ ಹೇಳಿಕೆಗಳನ್ನು ತೆಗೆದುಕೊಂಡು ನೀವು ಇಷ್ಟು ಹೊತ್ತು ಚರ್ಚೆ ಮಾಡಿದಿರಿ. ದಯವಿಟ್ಟು ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಒಂದು ನಿರ್ದಿಷ್ಟ ವಿಚಾರವಾಗಿ ನಾನು ಮಾತನಾಡಿಲ್ಲ. . . . .

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಅಥವಾ ಅವತ್ತಿನ ದಿವಸ, 17ನೇ ತಾರೀಖಿನ ದಿವಸ ಪತ್ರಿಕಾಗೋಷ್ಠಿಯನ್ನೂ ಕರೆದಿಲ್ಲ.

(ಗೊಂದಲ)

ಅಧ್ಯಕ್ಷರು : Clarification ಗೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : 17ನೇ ತಾರೀಖಿನ ದಿವಸ ನಾನು ಪೂಜೆ ಮಾಡಿದಾಗ. . . . .

(ಗೊಂದಲ)

ಅಧ್ಯಕ್ಷರು : Please, ನೀವು ಹಿರಿಯರಾಗಿ ಅಲ್ಲೂ ಮಾತನಾಡುತ್ತೀರಲ್ಲ? ಏನಿದು?

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಪತ್ರಕರ್ತರು ಬಂದು ನನ್ನನ್ನು ಕೆಲವು ಪ್ರಶ್ನೆ ಕೇಳಿದರು. ಆ ಪ್ರಶ್ನೆ ಕೇಳಿದ ಹಿನ್ನೆಲೆಯಲ್ಲಿ ನಾನು ಈ ಎರಡು ವಿಚಾರ ಗಳನ್ನು ಹೇಳಿದ್ದೇನೆ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಆ ಎರಡು ವಿಚಾರಗಳಲ್ಲಿ ಪೂರ್ಣವಾಗಿ ನಾನೇನೂ writing ನಲ್ಲಿ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು : Please, ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಆ ಪತ್ರಿಕಾ ಹೇಳಿಕೆಯಲ್ಲಿ ನಾನು ಹೇಳಿರತಕ್ಕಂಥದ್ದು, ...

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ನಮ್ಮ ರೇವಣ್ಣನವರು ಹೇಳಿದರು. ಅದೇ ಉತ್ತರ. ಏಕೆಂದರೆ, ಹಲವಾರು ಸೊಸೈಟಿಗಳಲ್ಲಿ ದುರುಪಯೋಗವಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು : ಈ ತರಹ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಕೃಷ್ಣ ಬೈರೇಗೌಡರವರೂ ಸಹ ದುರುಪಯೋಗವಾಗಿದೆ ಎಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು : ಒಂದೂವರೆ ಗಂಟೆ ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಕೆಲವು ವಿಚಾರ ನನಗೆ ಗೊತ್ತಿದ್ದಂಥ ಹಿನ್ನೆಲೆಯಲ್ಲಿ. ಈ ರೀತಿ ಸಹಕಾರ ಸಂಘಗಳಲ್ಲಿ ಅನ್ಯಾಯ ನಡೆಯುತ್ತಿದೆ ಎನ್ನತಕ್ಕಂಥ ಮಾತನ್ನೂ ನಾನು ಹೇಳಿದ್ದೇನೆ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಅದನ್ನು ಬಿಟ್ಟರೆ, ಬೇರೆ ಯಾವುದೇ ಒಬ್ಬ ಮನುಷ್ಯನ ಅಥವಾ ಒಬ್ಬ ವ್ಯಕ್ತಿಯ ವಿರುದ್ಧವಾಗಿ ನಾನು ಮಾತನಾಡಿಲ್ಲ. ಇದನ್ನು ನಾನು ಮೊದಲನೆಯದಾಗಿ, ರೇವಣ್ಣನವರಿಗೆ ಸ್ಪಷ್ಟಪಡಿಸುತ್ತಿದ್ದೇನೆ. ಆದರೆ, ಎಲ್ಲಾ ಪತ್ರಿಕೆಗಳಲ್ಲಿ ಒಂದೇ ರೀತಿ ಬಂದಿಲ್ಲ. ಒಂದೊಂದು ಪತ್ರಿಕೆಯಲ್ಲಿ ಒಂದೊಂದು ರೀತಿ ಬಂದಿದೆ, ಇನ್ನೊಂದು ಪತ್ರಿಕೆಯಲ್ಲಿ ಒಂದು ರೀತಿ ಬಂದಿದೆ. ಆದರೆ ಅದನ್ನು ಅತಿ ದೊಡ್ಡದಾಗಿ ಮಾಡಿ ಮಾನ್ಯ ರೇವಣ್ಣನವರು ನನಗೆ ಏನೊಂದು ಅವಕಾಶ ಮಾಡಿಕೊಟ್ಟಿದ್ದಾರೆಂದರೆ, ಇಲಾಖೆಯಲ್ಲಿ ಆಗಿರತಕ್ಕಂಥ ಹಲವಾರು ಲೋಪದೋಷಗಳನ್ನು ಸದನದ ಮುಂದೆ ಜನತೆಯ ಮುಂದೆ ಇಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ನಾನು ರೇವಣ್ಣನವರಿಗೆ ಧನ್ಯವಾದಗಳನ್ನು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ನೀವು ನಿಮ್ಮ ಸ್ಥಾನಗಳಿಗೆ ಹೋಗಿ ಮಾತನಾಡಿ. ಕ್ಲಾರಿಫಿಕೇಷನ್‌ನಲ್ಲಿ ಅವಕಾಶ ಕೊಡುತ್ತೇನೆ, ಹೋಗಿ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : "ಎಲ್ಲರಿಗಾಗಿ ನಾನು ಮತ್ತು ನಾನು ಎಲ್ಲರಿಗಾಗಿ" ಎನ್ನುವ ಒಂದು ತತ್ವದ ಮೇಲೆ ಸಹಕಾರ ಸಂಘ ನಡೆಯುತ್ತಿದೆ. ಈ ಸಹಕಾರ ಸಂಘಗಳಲ್ಲಿ ಕರ್ನಾಟಕ ರಾಜ್ಯದಲ್ಲಿ 2.64 ಕೋಟಿ ಸದಸ್ಯರು ಇದ್ದಾರೆ. ಈ ಸದಸ್ಯರು ತಮಗಾಗಿ, ಸಾಮಾಜಿಕ ಭದ್ರತೆಗೆ, ಆರ್ಥಿಕ ಭದ್ರತೆಗೆ ರೂಪಿಸಿಕೊಂಡಂಥ ಸಂಘಗಳು.

(ಗೊಂದಲ)

ಅಧ್ಯಕ್ಷರು : ತಾವು ತಮ್ಮ ಸ್ಥಾನಕ್ಕೆ ಹೋಗಿ. ಕ್ಲಾರಿಫಿಕೇಷನ್‌ನಲ್ಲಿ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಈ ಸಹಕಾರ ಸಂಘಗಳನ್ನು ನಡೆಸತಕ್ಕಂತವರು ಯಾರು ಸಹಕಾರಿಗಳಾಗಿದ್ದಾರೆ, ಆ ಸಹಕಾರಿಗಳ ಅವರ ಆರ್ಥಿಕ ಪರಿಸ್ಥಿತಿ ಮತ್ತು ಅವರ ಕ್ಷೇಮಾಭಿವೃದ್ಧಿಗೋಸ್ಕರವಾಗಿ ದುಡಿಯ ತಕ್ಕಂಥ ಸಂಸ್ಥೆಗಳಾಗಬೇಕಾಗಿತ್ತು ಎಂಬುದು ನನ್ನ ನಿಜವಾದ ಅಭಿಮತ. ಆದರೆ, ಇಲ್ಲಿ ಕೋ–ಆಪರೇಟಿವ್ ಸೊಸೈಟಿಸ್ ಮತ್ತು ಬ್ಯಾಂಕ್‌ಗಳು ಎಲ್ಲವೂ ಸಹ ಕರ್ನಾಟಕ ರಾಜ್ಯದಲ್ಲಿ ಇರತಕ್ಕಂತಹ ಸ್ಥಿತಿಗತಿಯನ್ನು ತಮ್ಮ ಮುಂದೆ ಇಡುವುದಕ್ಕೆ ಮಾನ್ಯ ರೇವಣ್ಣನವರ ಅಭಿಪ್ರಾಯಕ್ಕೆ ನಾನು ಹೇಳುತ್ತಿದ್ದೇನೆ. ಇಲ್ಲಿ ಒಟ್ಟು ಹಣ ದುರುಪಯೋಗವಾಗಿರುವ ವಿವರಗಳು: ಹಣ ದುರುಪಯೋಗವಾಗಿರುವ ಸಹಕಾರ ಸಂಘಗಳ ಸಂಖ್ಯೆ:5589. ಸಹಕಾರ ಸಂಘಗಳಲ್ಲಿ ಒಟ್ಟು ಹಣ ದುರುಪಯೋಗವಾಗಿರತ್ತಕಂಥದ್ದು 169 ಕೋಟಿ 49 ಲಕ್ಷ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಹಣ ದುರುಪಯೋಗದ ಮೇಲೆ ಸಿವಿಲ್ ಕ್ರಮ ತೆಗೆದುಕೊಂಡಿರುವುದು 8,657. ದುರುಪಯೋಗದ ಮೊತ್ತ ಸಿವಿಲ್ ಕ್ರಮಗಳಲ್ಲಿ ದುರುಪಯೋಗವಾಗಿರುವುದು 118 ಕೋಟಿ 82 ಲಕ್ಷ.

(ಗೊಂದಲ)

ಅಧ್ಯಕ್ಷರು : ನೀವು well ನಲ್ಲಿ ಮಾತನಾಡುವ ಹಾಗೆ ಇಲ್ಲ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಕ್ರಿಮಿನಲ್ ಕೇಸ್ ಹಾಕಿರುವ ಪ್ರಕರಣಗಳ ಸಂಖ್ಯೆ: 3,430. ಕ್ರಿಮಿನಲ್ ಕ್ರಮಕ್ಕೆ ಒಳಪಡಿಸಿದ ಮೊತ್ತ 80.22 ಕೋಟಿ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಶಿಕ್ಷೆ ವಿಧಿಸಿರುವುದು 423. ಅವರಿಗೆ ಇದನ್ನು ಕೇಳುವುದಕ್ಕೆ ಇಷ್ಟವಿಲ್ಲ. 423 ಕೇಸ್‌ನಲ್ಲಿ ನಾವು ಶಿಕ್ಷೆ ವಿಧಿಸಿದ್ದೇವೆ. ಹಣದ ಬಗ್ಗೆ ಸಹಕಾರ ಸಂಘದ ಅಧಿನಿಯಮ 159ರ ಪ್ರಕಾರ.

(ಗೊಂದಲ)

ಅಧ್ಯಕ್ಷರು : ಯಾವುದೂ ದಾಖಲೆಗೆ ಹೋಗುವುದಿಲ್ಲ. ಇದು ಯಾವುದೂ ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

(ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಹಂತದಲ್ಲಿ ನಡವಳಿಯನ್ನು ದಾಖಲಿಸಿರುವುದಿಲ್ಲ)

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಪ್ರಕರಣಗಳ ಸಂಖ್ಯೆ: 8099 ರಲ್ಲಿ ಆಸ್ತಿಯನ್ನು ಅಟ್ಯಾಚ್ ಮಾಡಿದ್ದೇವೆ. ಒಟ್ಟು ಆಸ್ತಿಯನ್ನು ಅಟ್ಯಾಚ್ ಮಾಡಿರುವ ಮೊತ್ತ 39 ಕೋಟಿ 81 ಲಕ್ಷ.

(ಗೊಂದಲ)

ಅಧ್ಯಕ್ಷರು : ನೀವು ಅಲ್ಲಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಒಡಂಬಡಿಕೆಯಿಂದ ದುರುಪಯೋಗವಾದ ಹಣ ವಸೂಲಿ ಮಾಡಿರುವುದು 62 ಕೋಟಿ 12 ಲಕ್ಷ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಪುಟ್ಟಸ್ವಾಮಿಯವರೇ, ಒಂದು ನಿಮಿಷ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಅಧ್ಯಕ್ಷರು, ಹೇಳಲಿ ಸಾರ್.

ಅಧ್ಯಕ್ಷರು : ಒಂದು ನಿಮಿಷ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅಧ್ಯಕ್ಷರೆ ಹೇಳುತ್ತಿರುವುದು. ನಾವು ಹೇಳಿದರೆ ಕುಳಿತುಕೊಳ್ಳುವುದಿಲ್ಲವೆ?

(ಗೊಂದಲ)

ಶ್ರೀ ಎಂ.ಪಿ. ಅಶೋಕ : ಸ್ವಾಮಿ ಬಹಳ ಸಬ್ಜೆಕ್ಟ್ ಇದೆ. ಹೀಗಾಗಿ ಎರಡು ದಿನ ಸಭೆಯನ್ನು ಮುಂದಕ್ಕೆ ಹಾಕಿ. ಎರಡು ದಿನ ಅಧಿವೇಶನ ಮುಂದಕ್ಕೆ ಹಾಕಿ. ದಯವಿಟ್ಟು ಎರಡು ದಿನ ಕಂಟಿನ್ಯೂ ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇವತ್ತು ಅಧಿವೇಶನದ ಕೊನೆಯ ದಿನ. ಅಷ್ಟು ದಿನದಿಂದ ಚರ್ಚೆ ನಡೆದು ಇವತ್ತು ಹೀಗೇಕೆ? ಈಗ ಒಂದೈದು ನಿಮಿಷ ಮಾತನಾಡಲು ಇವರಿಗೆ ಅವಕಾಶ ಕೊಡಿ. ಇವರು ಮಾತನಾಡಿದ ಮೇಲೆ ಅವರು ಉತ್ತರ ಕೊಡಲಿ. ಆಯಿತು, ನಡೆಯಿರಿ, ನಿಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ.

ಅಧ್ಯಕ್ಷರು : ಇಷ್ಟೊತ್ತು ಅದನ್ನು ಬಿಟ್ಟು ಬೇರೆ ಹೇಳಿಕೊಂಡು ಕುಳಿತಿದ್ದೀರಿ. ತಾವು ಇರಲಿಲ್ಲ. ಆಯಿತು, ತಾವು ಐದು ನಿಮಿಷದಲ್ಲಿ ಹೇಳಿ.

(ಈ ಹಂತದಲ್ಲಿ ಜೆ.ಡಿ.(ಎಸ್) ಸದಸ್ಯರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಮರಳಿದರು)

ಶ್ರೀ ಹೆಚ್.ಡಿ. ರೇವಣ್ಣ : (ಮಾನ್ಯ ಅಧ್ಯಕ್ಷರೆ, ಕೊನೆಯಿಂದಾಗಿ ಬುಲೆಟ್ ಪಾಯಿಂಟ್ ಹೇಳಿ ಬಿಡುತ್ತೇನೆ. ನಾನೇನು ಬೇರೆ ಹೊಸದು ಹೇಳುವುದಿಲ್ಲ. ಮಹತ್ವದ ವಿಷಯ ಇರುವುದರಿಂದ ಮಾನ್ಯ ಮಂತ್ರಿಗಳು ಹೇಳಿದ್ದರಿಂದ ಇದನ್ನು ನಾನು ತಂದೆ, ಮಾನ್ಯ ಮಂತ್ರಿಗಳು ಹೇಳದೇ ಹೋಗಿದ್ದರೆ ನಾನು ಇದನ್ನು ತರುತ್ತಿರಲಿಲ್ಲ. ಸನ್ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ, 23–07–2008 ರಲ್ಲಿ ಏನಾಗಿದೆ ಆ notification 8-2008 ಸರ್ಕಾರದ ಕಾರ್ಯದರ್ಶಿಗಳು ಕಳುಹಿಸಿರುವ ಕಾಪಿ ಕಳುಹಿಸುತ್ತೇನೆ. ನಬಾರ್ಡ್‌ನ ಗೈಡ್‌ಲೈನ್ಸ್ ವಿರುದ್ಧವಾಗಿ 35 ಲಕ್ಷದ ಮೇಲೆ ಕೊಡಬಾರದು ಎಂದು ಇದ್ದರೂ 25 ಕೋಟಿಗೆ ಕಾನೂನು ಬಾಹಿರವಾಗಿ ಕೊಟ್ಟಿರುವುದನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ಮತ್ತೊಂದು ವಿಚಾರ ಹೇಳುವುದಾದರೆ, ಮಾನ್ಯ ಸಚಿವರೆ, ನನ್ನ ಬಗ್ಗೆಯಾಗಲಿ ಇದರ ಬಗ್ಗೆಯಾಗಲಿ ಮಾನ್ಯ ಶಿವಲಿಂಗೇಗೌಡರವರು ಹೇಳಿದ ಬಗ್ಗೆ ತಪ್ಪು ತಿಳಿದುಕೊಳ್ಳಬೇಡಿ. ಕೆ.ಎಂ.ಎಫ್. ಬಗ್ಗೆ 1995 ರಿಂದ ಪರಿಶೀಲನೆ ಎಂದು ಹೇಳಿದ್ದಾರೆ. ಅದರ ಬಗ್ಗೆ ತಾವು ಏನು ಬೇಕಾದರೂ ಮಾಡಿ, ನಾವೇನು ಬೇಡ ಎನ್ನುವುದಿಲ್ಲ. 1995 ರಿಂದ

ಅಲ್ಲದಿದ್ದರೆ from the beginning, ಕೆ.ಎಂ.ಎಫ್. ಯಾವಾಗ ಪ್ರಾರಂಭ ಆಯಿತು ಆಗಿನಿಂದಲೂ ಮಾಡಿ. ನಾನಲ್ಲ ಸನ್ಮಾನ್ಯ ಮಂತ್ರಿಗಳೇ ಕೆ.ಎಂ.ಎಫ್. ಬಗ್ಗೆ 1995 ರಿಂದ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ, ಸಂತೋಷ ಇದಕ್ಕೆ ನನ್ನದೇನೂ ತಕರಾರಿಲ್ಲ. 1995 ರಿಂದ 2000 ವರೆಗೆ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿದ್ದಾಗ ಮಾಡಿದ್ದಾರೆ, ಅದರ ಮೇಲೆ ಆಡಿಟ್‌ನಲ್ಲಿ ಏನಾದರೂ ಒಂದು ಅಬ್ಜೆಕ್ಷನ್ ಯಾರ ಮೇಲಾದರೂ ಇದ್ದರೆ ಮಾಡಿಕೊಳ್ಳಿ, ನಾವೇನು ಬೇಡ ಎನ್ನುವುದಿಲ್ಲ. 2000 ದಿಂದ 2008 ರವರೆಗೆ ಸನ್ಮಾನ್ಯ ಯಡಿಯೂರಪ್ಪನವರೆ ತನಿಖೆ ಮಾಡಿಸಿದ್ದಾರೆ. ಆ ವರದಿಯೂ ಬಂದಿದ್ದು ಅದರ ಕಾಪಿಯನ್ನು ತಮಗೆ ಕೊಡುತ್ತೇನೆ. ನಾನು ಅದರ certified copy ತೆಗೆದುಕೊಂಡಿದ್ದೇನೆ. 2001 ರಿಂದ 2008 ರವರೆಗೆ ಆ ವರದಿಯಲ್ಲಿ ನನ್ನ ಮೇಲೆ ಏನಾದರೂ ಒಂದು ಆಪಾದನೆ ಇದ್ದರೆ, ಯಾವುದಾದರೂ ದುಡ್ಡು-ಗಿಡ್ಡು ಹೊಡೆದಿರುವುದಿದ್ದರೆ ನೀವು ಹೇಳಿ. ಮಾನ್ಯ ಶಿವಲಿಂಗೇಗೌಡರವರ ಒಂದು ಪ್ರಶ್ನೆಗೆ ಈ ಸದನಕ್ಕೆ ಉತ್ತರ ಕೊಟ್ಟಂಥ ಕಾಪಿಯಲ್ಲಿ, ಮತ್ತು ದಿ: 8-3-2011 ರಂದು ಮಾಹಿತಿ ಹಕ್ಕು ಕಾಯಿದೆಯಲ್ಲಿ ಈ ಮಾಹಿತಿಯನ್ನು ತೆಗೆದುಕೊಂಡಿದ್ದು ಇದೆ. ಸಹಕಾರ ಮಂತ್ರಿಗಳೇ ನನ್ನ ಮೇಲೆ ಏನಾದರೂ ಇದ್ದರೆ ಅವರೇ ಏನು ಬೇಕಾದರೂ ಮಾಡಿಕೊಳ್ಳಿ. ಎರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಮಂತ್ರಿಗಳು 1995 ರಿಂದ ಕೆ.ಎಂ.ಎಫ್. ನಲ್ಲಿ ಹಾಲು ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುವಲ್ಲಿ ಅವ್ಯವಹಾರ ಜರುಗಿರುತ್ತದೆ ಎಂಬುದಾಗಿ ಹೇಳಿಕೆ ಕೊಟ್ಟಿದ್ದರೆ. ನೀವು ಹೇಳಿಕೆ ಕೊಟ್ಟಿರುವುದನ್ನು ಮಾತ್ರ ಹೇಳುತ್ತಿದ್ದೇನೆ, ಬೇರೆ ಏನೂ ಹೇಳುತ್ತಿಲ್ಲ. ಬೇಕಾದರೆ ನೋಡಿ, ನೀವೇ ಹೇಳಿದ್ದೀರಿ.

ಅಧ್ಯಕ್ಷರು : ನೀವು ಆ ಕಡೆ ನೋಡಬೇಡಿ, ಈ ಕಡೆ ನೋಡಿ.

ಶ್ರೀ ಹೆಚ್.ಡಿ. ರೇವಣ್ಣ : 1995 ರಿಂದ ಈಚೆಗೆ ಕೆ.ಎಂ.ಎಫ್. ನಲ್ಲಿ ಸಹಕಾರಿ ಲೆಕ್ಕ ಪರಿಶೋಧನ ಇಲಾಖೆಯಿಂದ, ಲೆಕ್ಕ ಪರಿಶೋಧನ ವರದಿಯಲ್ಲಿ ಯಾವುದಾದರೂ ಪ್ರಾಡಕ್ಟ್‌ನಲ್ಲಿ ನನ್ನ ಹೆಸರು ಇದ್ದು ಅಥವಾ ಏನಾದರೂ ಇದ್ದರೆ ಏನು ಬೇಕಾದರೂ ಮಾಡಿಕೊಳ್ಳಿ ನಾನೇನು ಬೇಡ ಎನ್ನುವುದಿಲ್ಲ. ಈಗ ಏನಾಗಿದೆ ಎಂದರೆ, ಉಚ್ಚನ್ಯಾಯಾಲಯ ತೀರ್ಮಾನ ಮಾಡಿ ಎಲ್ಲಾ ಆದ ಮೇಲೂ ಮತ್ತೆ ನೀವು 1995 ರಿಂದ ಮಾಡುತ್ತೇವೆ ಎನ್ನುತ್ತೀರಿ, ಹೈಕೋರ್ಟಿಗೆ ಹೋದರು, ಅಲ್ಲಿ ಆ ರಿಟ್ ವಜಾ ಆಯಿತು.

ಆದರೂ ಅವರು ಏನು ಬೇಕಾದರೂ ಮಾಡಿಕೊಳ್ಳಿ, ನಾವೇನು ಬೇಡ ಎನ್ನುವುದಿಲ್ಲ. ಅವರಿಗೆ ನಾನು ಎರಡೇ ಪ್ರಶ್ನೆ ಕೇಳುವುದು. ಸನ್ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೂ ತಂದು ಹಲವರು ಅರ್ಜಿಗಳನ್ನು ಕೊಟ್ಟಿದ್ದೇನೆ. ಕಳೆದ ನಾಲ್ಕು ವರ್ಷಗಳ ಹಿಂದೆ ಕೆ.ಎಂ.ಎಫ್. ನೊಳಗೆ, ತಮಗೆ 7.5.2012ರ ಲೆಟರ್‌ನ್ನು ನಿಮಗೂ ಮಾನ್ಯ ಸಹಕಾರ ಮಂತ್ರಿಗಳಿಗೆ ಕಳುಹಿಸಿ ಕೊಡುತ್ತೇನೆ. 64ರ ಎನ್‌ಕ್ವೈರಿ ಮಾಡುವುದಕ್ಕೆ ದಾಖಲೆಗಳ ಸಮೇತ ಕಳುಹಿಸಿ ಕೊಟ್ಟಿದ್ದೇನೆ. ಹತ್ತಾರು ಲೆಟರ್ಸ್ ಕೊಟ್ಟರೂ ಇವತ್ತಿನವರೆವಿಗೂ ಮಾಡಿದ್ದೀರಾ? ಮಾನ್ಯ ಅಧ್ಯಕ್ಷರೆ, ಈ ಲೆಟರ್‌ನ್ನು ತಮ್ಮ ಮೂಲಕ ಅವರಿಗೆ ಕಳುಹಿಸಿ ಕೊಡುತ್ತೇನೆ. ರೈತರ ಬಗ್ಗೆ ಮಾನ್ಯ ಯಡಿಯೂರಪ್ಪನವರಿಗೆ ಕಾಳಜಿ ಇದೆ. ಸುಮಾರು 250 ಕೋಟಿ ರೂಪಾಯಿ ಬೆಲೆ ಬಾಳುವ 10 ಸಾವಿರ ಟನ್ ಎಸ್‌ಎಂಪಿ ಪೌಡರ್ ಸ್ಟಾಕ್ ಇದೆ. ಸುಮಾರು 3 ಸಾವಿರ ಟನ್ ಬೆಣ್ಣೆ, ಕಳೆದ 6 ತಿಂಗಳುಗಳಿಂದ ಮಾರಾಟ ಮಾಡುವುದಕ್ಕೆ ಆಗಿಲ್ಲ. ಪಾಪ ಅಲ್ಲಿನ ಎಂ.ಡಿ. ಗೆ ಕೆಲಸ ಮಾಡುವುದಕ್ಕೆ ಬಿಡುತ್ತಿಲ್ಲ. ಮೊದಲು Animal Husbandry Secretary ಯೊಬ್ಬರು ಪರಿಶಿಷ್ಟ ಜಾತಿಗೆ ಸೇರಿದವರು ಇದ್ದರು, ಅವರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾನೆಂದು, ಅವರು ಕಾನೂನು ಬಾಹಿರವಾಗಿ ಮಾಡುವುದಕ್ಕೆ ಬಿಡುವುದಿಲ್ಲವೆನ್ನುವ ದೃಷ್ಟಿಯಿಂದ 24 ಗಂಟೆಯೊಳಗೆ ಅವನನ್ನು ತೆಗೆದು ಹಾಕಿದರು. ಅವರು ಕೋರ್ಟಿನಲ್ಲಿ ಬಂದು, ಕಾನೂನು ಬಾಹಿರವಾಗಿ ನಡೆಯುವಂಥ ಕೃತ್ಯಗಳನ್ನು ಖಂಡಿಸುತ್ತಿದ್ದರು ಎನ್ನುವ ಉದ್ದೇಶಕ್ಕೆ, ನೀವು ಮಾಡುತ್ತೀರಾ? ಇವತ್ತು ರೈತರದ್ದು ಬೆಂಗಳೂರಿನ ಒಕ್ಕೂಟದಲ್ಲಿ ಸುಮಾರು 19 ಕೋಟಿ ಬಾಕಿ ಕೊಡಬೇಕಾಗಿದೆ. ರೈತರು 6 ರಿಂದ 8 ವಾರಗಳ ಕಾಲ ಹಾಲು ಹಾಕಿರುವ ಬಾಕಿ. ಕೋಲಾರದಲ್ಲಿ 25 ಕೋಟಿ ಕೊಡಬೇಕು, ಮಂಡ್ಯದಲ್ಲಿ 35 ಕೋಟಿ ಕೊಡಬೇಕು, ಹಾಸನದಲ್ಲಿ 45 ಕೋಟಿ ಕೊಡಬೇಕು, ಮೈಸೂರಿನಲ್ಲಿ 10 ಕೋಟಿ ಕೊಡಬೇಕು, ತುಮಕೂರಿನಲ್ಲಿ 20 ಕೋಟಿ ಕೊಡಬೇಕು, ಮಾನ್ಯ ಯಡಿಯೂರಪ್ಪನವರೆ, ಶಿವಮೊಗ್ಗದಲ್ಲಿ 10 ಕೋಟಿ ಕೊಡಬೇಕು. ಇವತ್ತಿನ ದಿವಸ ಸುಮಾರು 200 ಕೋಟಿ ರೂಪಾಯಿನಷ್ಟು ರೈತರು ಕೊಟ್ಟಂಥ ಹಾಲಿಗೆ ಕೊಡಬೇಕಾಗಿದೆ. ಇವತ್ತಿನ ದಿವಸ ರೈತರು ಬರಗಾಲದ ಸಮಸ್ಯೆಯಿಂದ ಇರುವಾಗ ಅವರಿಗೆ ಏನಾದರೂ ದುಡ್ಡನ್ನು ಕೊಟ್ಟಿದ್ದೀರಾ? 250 ಕೋಟಿ ರೂಪಾಯಿ ಬೆಲೆ ಬಾಳುವಂಥ product ಗಳನ್ನು ಏತಕ್ಕೆ ಮಾರಾಟ ಮಾಡಿಲ್ಲ? ಮೊದಲು

1 ಕೆ.ಜಿ. product ಗೆ 180 ರೂಪಾಯಿ ಇತ್ತು. ಈಗ ಒಂದು ಕೆ.ಜಿ.ಗೆ 140 ರೂಪಾಯಿ ಆಗಿದೆ. ಅಂದರೆ, ಒಂದು ಕೆ.ಜಿ.ಗೆ 40 ರೂಪಾಯಿ ನಷ್ಟವಾಗುತ್ತದೆ. ಈ ನಷ್ಟಕ್ಕೆ ಯಾರು ಕಾರಣ? ಈಗ 10 ಸಾವಿರ ಟನ್ ಇದೆ. 1 ಕೆ.ಜಿ. ಎಸ್.ಎಂ.ಪಿ. ಪೌಡರ್‌ಗೆ ಇವತ್ತಿನ ದಿವಸ 40 ರೂಪಾಯಿ ಕಡಿಮೆ ಆಗುತ್ತದೆ. ಇದನ್ನು ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ ಕೊಟ್ಟಿದ್ದರೆ ನಷ್ಟವಾಗುತ್ತಿರಲಿಲ್ಲ. ಇದರ ಬಗ್ಗೆ ನಾನು ಹಲವಾರು ಪತ್ರವನ್ನು ಬರೆದಿದ್ದೇನೆ. ಟೆಂಡರ್‌ನ್ನು ಏತಕ್ಕೋಸ್ಕರ ಸರಿಯಾದ ಸಮಯದಲ್ಲಿ ಕರೆಯಲಿಲ್ಲ? ಈ ಒಕ್ಕೂಟಗಳಿಗೆ ಕೇಂದ್ರ ಎನ್‌ಡಿಡಿಸಿ involve ಆಗಿರುವುದರಿಂದ ಇದಕ್ಕೆ ದುಡ್ಡು ಕೊಡಿಸಿ ಎಂದು ಕೇಂದ್ರದ ಮಾನ್ಯ ಶರದ್ ಪವಾರ್‌ರವರಿಗೆ ಹೇಳಿ. 1995 ರಿಂದ ತನಿಖೆ ಮಾಡಿಸುತ್ತೇನೆಂದರೆ ತನಿಖೆ ಮಾಡಬೇಡಿ ಎಂದು ನಾವೇನಾದರು ಹಿಡಿದುಕೊಂಡಿದ್ದೇವೆಯೇ?

ಅಧ್ಯಕ್ಷರು : ಮಾನ್ಯ ರೇವಣ್ಣರವರೆ, ದಯವಿಟ್ಟು ಬೇಗ ಮುಕ್ತಾಯ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಸಹಕಾರ ಇಲಾಖೆಗೆ ಬರುವ ಗೃಹ ನಿರ್ಮಾಣ ಇರಬಹುದು ಅಥವಾ ಬೇರೆ ಇರಬಹುದು. ಆದರೆ, ಮಾನ್ಯ ಮಂತ್ರಿಗಳು ಏನಾದರೂ ರಾಜಕೀಯ ದುರುದ್ದೇಶದಿಂದ ಮಾಡುತ್ತೇವೆಂದು ಹೆದರಿಸುವುದಕ್ಕೆ ಹೋದರೆ ಸರಿಯಲ್ಲ. xxx xxx xxx ಮಾನ್ಯ ಯಡಿಯೂರಪ್ಪನವರ ಬಗ್ಗೆ ನಮಗೆ ಗೌರವ ಇದೆ. ಇಂಥ ಮಂತ್ರಿಗಳಿಂದ ಮಾನ್ಯ ಯಡಿಯೂರಪ್ಪನವರು ಇವತ್ತು ಇಕ್ಕಟ್ಟಿಗೆ ಸಿಕ್ಕಿಕೊಂಡಿದ್ದಾರೆ.

ಶ್ರೀ ಬಿ.ಜೆ. ಪುಟ್ಟಸ್ವಾಮಿ : I object this. No, no, He can't speak….. xxx xxx xxx ಎಂದರೆ ಏನರ್ಥ? ಬಾಯಿಗೆ ಬಂದ ಹಾಗೆ ಮಾತನಾಡುತ್ತೀರಾ? ನೀವೇನು ಮಾತನಾಡುತ್ತೀರಿ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಈ ಹೇಳಿಕೆಯನ್ನು ನಾನು ಕೊಟ್ಟಿಲ್ಲವೆಂದು ರಾಜ್ಯಾದ್ಯಂತ ಕ್ಷಮೆ ಕೇಳಲಿ.

---

xxxxx (ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ)

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಮಾನ್ಯ ಅಧ್ಯಕ್ಷರೆ, ಅವರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ನಾನು ರೆಕಾರ್ಡ್‌ನಲ್ಲಿರುವ ಬಗ್ಗೆ ಮಾತನಾಡುತ್ತಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಇವತ್ತು ಮಾನ್ಯ ಮಂತ್ರಿಗಳು ರಾಜೀನಾಮೆ ಕೊಡಬೇಕು.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಹೇಳಿರುವ ಪದವನ್ನು ಕಡತದಿಂದ ತೆಗೆಸಬೇಕು.

ಅಧ್ಯಕ್ಷರು : ಆ ಪದವನ್ನು ಕಡತದಿಂದ ತೆಗೆಸುತ್ತೇನೆ. ಮಾನ್ಯ ರೇವಣ್ಣನವರೆ, ತಾವು ಬೇಗ ಮುಗಿಸಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ ಅವರು ಬಿಡುತ್ತಿಲ್ಲ. ನಾನು ಏನೂ ಹೇಳುವುದಕ್ಕೆ ಬಯಸುತ್ತೇನೆಂದರೆ, ಇವರ ಪ್ರಕಾರ ಹೋದರೆ, ಹಿಂದಿನ ಮಂತ್ರಿಗಳು ಏನೋ ತಪ್ಪು ಮಾಡಿದ್ದರೆ ಎಂಬ ಭಾವನೆ ರಾಜ್ಯದ ಜನತೆಗೆ ಹೋಗಿದೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಅವರು ಪತ್ರಿಕಾ ಹೇಳಿಕೆಯಲ್ಲಿ ಕೊಟ್ಟಿರುವ ಮಾಹಿತಿ ನಿಜವೋ ಅಥವಾ ಸುಳ್ಳೊ ಎಂಬ ಬಗ್ಗೆ ಅವರೇ ಹೇಳಲಿ? ಇಲ್ಲಿದ್ದರೆ ನಾನು ಈ ಮಾಹಿತಿ ಕೊಟ್ಟಿಲ್ಲ, ಯಾರೋ ಪತ್ರಿಕೆಯವರು ಹೊಡೆದಾಡಿಸುವುದಕ್ಕೋಸ್ಕರ ಅಥವಾ ಬೇಕೆಂದು ಪ್ರಚಾರಕ್ಕೆ ಸುಳ್ಳು ಬರೆದು ಕೊಂಡಿದ್ದಾರೆಂದರೆ ನನ್ನದೇನೂ ಅಭ್ಯಂತರ ಇಲ್ಲ. ಮಾನ್ಯ ಸಚಿವರು ಹೇಳಿರುವುದಕ್ಕೋಸ್ಕರ ಅದರ ಎಲ್ಲ ದಾಖಲೆಗಳನ್ನು ನಿಮ್ಮ ಗಮನಕ್ಕೆ ಕಳುಹಿಸಿ ಕೊಡುತ್ತಿದ್ದೇನೆ. ಕೆ.ಎಂ.ಎಫ್. ಇರಬಹುದು ಅಥವಾ ಇತರೆ ಎಲ್ಲ ದಾಖಲೆಗಳನ್ನು ನಾನು ತಮಗೆ ಕಳುಹಿಸಿ ಕೊಡುತ್ತೇನೆ. ನೀವೇ ಅದರ ಬಗ್ಗೆ ತನಿಖೆ ಮಾಡಿ. ಅದು ಬಿಟ್ಟು ಇವರು ಈ ರೀತಿಯಾಗಿ ನಮ್ಮನ್ನು ಹೆದರಿಸುವುದಕ್ಕೆ ಹೋದರೆ ನಾವೇನು ಹೆದರಿಕೊಂಡು ಓಡಿ ಹೋಗುತ್ತೇವೆಯೇ? ಇಂಥ ಪತ್ರಿಕಾ ಹೇಳಿಕೆಗಳಿಗೆಲ್ಲ ನಾವು ಹೆದರಿಕೊಂಡಿದ್ದರೆ ನಾವು ಮನೆಯಲ್ಲಿ ಸೇರಿಕೊಳ್ಳಬೇಕಾಗಿತ್ತು. ಇಂಥದವುಗಳೆಲ್ಲವನ್ನು ಎದುರಿಸಿಯೇ ನಾವು ಈ ಸದನಕ್ಕೆ ಬಂದಿರುವುದು.

ಅಧ್ಯಕ್ಷರು : ಆಯಿತು. ತಾವು ಬೇಗ ಮುಕ್ತಾಯ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಸಹಕಾರ ಇಲಾಖೆ ಬಗ್ಗೆ ಮಾನ್ಯ ಸಚಿವರು ಇವತ್ತು ಬಹಳ interest ಆಗಿದ್ದಾರೆ. ಆದ್ದರಿಂದ, ಮಾಡುವುದಕ್ಕೆ ಹೇಳಿ. ಏಕೆಂದರೆ, ಹಿಂದೆ ಇದ್ದಂಥ ಮಂತ್ರಿಗಳು ಯಾರೂ ಮಾಡಿಲ್ಲ. ಒಂದು ಕೆ.ಜಿ. ಹಾಲಿನ ಪೌಡರಿಗೆ ಸುಮಾರು 40 ರೂಪಾಯಿ ನಷ್ಟವಾಗಿದೆ. ಈ entire ನಷ್ಟವನ್ನು ಯಾರು ಭರಿಸಿಕೊಡುತ್ತಾರೆಂಬ ಬಗ್ಗೆ ದಯಮಾಡಿ ಉತ್ತರ ಹೇಳಬೇಕಾಗುತ್ತದೆ.

ಅಧ್ಯಕ್ಷರು : ಆಯಿತು xxx xxx xxx ಎಂಬ ಪದವನ್ನು ಕಡತದಿಂದ ತೆಗೆದು ಹಾಕಿದ್ದೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ : xxx xxx xxx ಅದನ್ನು ಕಡತದಿಂದ ತೆಗೆಸಬೇಕು.

ಅಧ್ಯಕ್ಷರು : ಆಯಿತು. ಅದನ್ನು ತೆಗೆಸುತ್ತೇನೆ. ಈಗ ಒಂದು ಪ್ರಕಟಣೆ ಇದೆ, ನಂತರ ನೀವು ಮಾತನಾಡಿ.

8. ಪ್ರಕಟಣೆ :

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2012ನೇ ಸಾಲಿನ ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ (ತಿದ್ದುಪಡಿ) ವಿಧೇಯಕವನ್ನು ದಿನಾಂಕ: 2.08.2012 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

---

xxxxx (ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ)